ಮಾನ್ವಿ ತಾಲೂಕಿನ ಶಾಸನಗಳು

ಡಾ. ಚನ್ನಬಸವ ಹಿರೇಮಠ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

ಮಾನ್ವಿ ತಾಲೂಕಿನ ಶಾಸನಗಳು

ಡಾ. ಚನ್ನಬಸವ ಹಿರೇಮಠ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

MANVI TALUKINA SHASANAGALU - Edited by
Dr. Channabasava Hirematha
Published by : Kannada Sahitya Parishat
Pampa Mahakavi Road Chamarajapet Bangalore - 560 018
Pages : 128+ v ; Price : **35-00,** 2000

ಮುದ್ರಣ : ೨೦೦೦

ಬೆಲೆ : ಮೂವತ್ತೈದು ರೂಪಾಯಿಗಳು

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ ಚಾಮರಾಜಪೇಟೆ ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಭಾಷೆ, ಸಂಸ್ಕೃತಿ, ನಾಡು-ನುಡಿಯ ಸಂರಕ್ಷಣೆ, ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆ. ಸುಮಾರು ೮೫ ವರ್ಷಗಳ ದೀರ್ಘಕಾಲದ ಇತಿಹಾಸವಿರುವ ಪರಿಷತ್ತು ಅನೇಕ ರೀತಿಗಳಲ್ಲಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿದೆ. ಅವುಗಳಲ್ಲಿ ಅತ್ಯುತ್ತಮ ಸಾಹಿತ್ಯ ಕೃತಿಗಳ ಪ್ರಕಟಣೆ ಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಸುಮಾರು ೧೦೦೦ ಕೃತಿಗಳನ್ನು ಪರಿಷತ್ತು ಹೊರತಂದಿದೆ. ಈ ಕೃತಿಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸಂಬಂಧಿಸಿವೆ.

ಕನ್ನಡದ ಜನತೆಗೆ ಉತ್ತಮ ಸಾಹಿತ್ಯವನ್ನು ನೀಡುವ ಸಲುವಾಗಿ ಅತ್ಯಂತ ಸುಲಭ ಬೆಲೆಯಲ್ಲಿ ಈ ಪುಸ್ತಕಗಳನ್ನು ಒದಗಿಸಲಾಗಿದೆ. ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮೂಲಕ ಜ್ಞಾನ ಪ್ರಸಾರ ಮಾಡುವುದು ನಮ್ಮ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಪ್ರಸ್ತುತ ಡಾ. ಚನ್ನಬಸವ ಹಿರೇಮಠ ಅವರು ಅಪಾರ ಶ್ರಮವಹಿಸಿ ಸಂಪಾದಿಸಿರುವ 'ಮಾನ್ವಿತಾಲ್ಲೂಕಿನ ಅಪ್ರಕಟಿತ ಶಾಸನಗಳು' ಎಂಬ ಈ ಪುಸ್ತಕವು ಶಾಸನಶಾಸ್ತ್ರದ ಅಧ್ಯಯನಕ್ಕೆ ಉಪಯುಕ್ತವಾಗಿದ್ದು ಆಕರ ಗ್ರಂಥವಾಗಿದೆ ಎನ್ನುವುದು ಗಮನಾರ್ಹ. ಸಾಹಿತ್ಯಾಸಕ್ತರು ಈ ಗ್ರಂಥವನ್ನು ಆದರದಿಂದ ಬರಮಾಡಿ ಕೊಳ್ಳುವರೆಂದು ಆಶಿಸುತ್ತೇನೆ. ಈ ಪುಸ್ತಕವನ್ನು ಸಂಪಾದಿಸಿ ನೀಡಿದ ಡಾ. ಚನ್ನಬಸವ ಹಿರೇಮಠ ಅವರಿಗೆ ಕೃತಜ್ಞತೆಗಳು. ಪ್ರಕಟಣೆಗೆ ಸಮ್ಮತಿಸಿದ ಪ್ರಕಟಣಾ ಸಮಿತಿಗೂ ಹಾಗೂ ಮುದ್ರಣ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಧನ್ಯವಾದಗಳು.

ಎನ್. ಬಸವಾರಾಧ್ಯ
ಅಧ್ಯಕ್ಷರು

ಸಂಪಾದಕರ ಮಾತು

ಕೊಪ್ಪಳದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ 'ತಿರುಳ್ಗನ್ನಡ'ಕ್ಕೆ ರಾಯಚೂರು ಜಿಲ್ಲೆಯ ಶಿಲ್ಪಕಲೆಯ ಬಗ್ಗೆ ಲೇಖನ ಬರೆಯಲು ಕ್ಷೇತ್ರಕಾರ್ಯ ಕೈಕೊಳ್ಳುವ ಅವಶ್ಯಕತೆ ಉಂಟಾಯಿತು. ಈ ವೇಳೆಗಾಗಲೇ ರಾಯಚೂರು ಜಿಲ್ಲೆಯ ಪ್ರಕಟಿತ ಶಾಸನಗಳ ಪಟ್ಟಿಯನ್ನು ಸಿದ್ಧಪಡಿಸಿಟ್ಟುಕೊಂಡಿದ್ದೆನು. ದೇವಾಲಯಗಳ ವಾಸ್ತು ಶೈಲಿಯ ಜೊತೆಗೆ ಅಲ್ಲಿಯ ಶಾಸನಗಳ ವಿವರಗಳನ್ನೂ ಬರೆದುಕೊಂಡು ಬಂದೆನು. ಆಗಿನ ನನ್ನ ಕ್ಷೇತ್ರ ಕಾರ್ಯವು ಕನಕಗಿರಿ, ಪುರ, ಆನೆಗುಂದಿ, ಕಲ್ಲೂರು, ಕುರುಡಿ ಮೊದಲಾದ ಪ್ರಮುಖ ಸ್ಥಳಗಳಿಗೆ ಮಾತ್ರ ಸೀಮಿತವಾಗಿತ್ತು. ಮುಂದೆ ರಾಯಚೂರು ಜಿಲ್ಲೆಯ ಶಾಸನಾಧ್ಯಯನಕ್ಕೆ ತೊಡಗಿದಾಗ ಪ್ರಕಟಿತ ಶಾಸನಗಳ ಕೊರತೆ ಅಧ್ಯಯನವನ್ನು ಕುಂಠಿತಗೊಳಿಸಿತು. ಆಗ ಒಟ್ಟು ಶಾಸನಗಳನ್ನು ಸಂಗ್ರಹಿಸಿ ಪ್ರಕಟಿಸುವ ಯೋಜನೆಯನ್ನು ಹಾಕಿಕೊಂಡೆನು. ವಿದ್ಯಾಗುರುಗಳಾದ ಡಾ.ಎಂ. ಎಂ. ಕಲಬುರ್ಗಿ ಅವರಿಗೆ ಒಮ್ಮೆ ಪ್ರಾಸಂಗಿಕವಾಗಿ ಈ ವಿಷಯವನ್ನು ತಿಳಿಸಿದೆನು. ನನ್ನ ಉತ್ಸಾಹವನ್ನು ಕಂಡು ಸೂಕ್ತ ಸಲಹೆಯನ್ನು ನೀಡಿ ಪ್ರೋತ್ಸಾಹಿಸಿದರು. ಅಲ್ಲದೆ ಶಾಸನ ಇಲಾಖೆಯ ಸಂಗ್ರಹದಲ್ಲಿರುವ ಅಪ್ರಕಟಿತ ಶಾಸನಗಳನ್ನು ಪ್ರತಿಮಾಡಿಕೊಂಡು ಬರಲು ಅನುಮತಿ ನೀಡುವಂತೆ ಅದರ ನಿರ್ದೇಶಕರರಾದ ಡಾ. ಮಾಧವ ಕಟ್ಟಿ ಅವರಿಗೆ ಒಂದು ಪತ್ರ ಬರೆದುಕೊಟ್ಟರು. ರಾಯಚೂರು ಜಿಲ್ಲೆಯ ಶಾಸನಗಳು ಪ್ರಕಟಗೊಳ್ಳಬೇಕಾದ ಅವಶ್ಯಕತೆಯನ್ನು ಕಲಬುರ್ಗಿಯವರು ತಮ್ಮ ಪತ್ರದಲ್ಲಿ ಸೂಚಿಸಿದ್ದರು. ಸಹೃದಯದ ಡಾ. ಕಟ್ಟಿಯವರಿಗೆ ಆ ಸಲಹೆ ಸೂಕ್ತವೆನಿಸಿ ಪ್ರತಿ ಮಾಡಿಕೊಂಡು ಬರಲು ಸಮ್ಮತಿಸಿದರು. ಮುಂದೆ ಈ ಇಲಾಖೆಗೆ ಶ್ರೀ ಎಂ. ಡಿ. ಸಂಪತ್ ಅವರು ನಿರ್ದೇಶಕರಾಗಿ ಬಂದರು. ಅವರೂ ಇದೇ ಬಗೆಯ ಸಹಕಾರವನ್ನು ನೀಡಿದರಲ್ಲದೆ ಅವುಗಳನ್ನು ಪ್ರಕಟಿಸಲು ಒಪ್ಪಿಗೆಯನ್ನೂ ಕೊಟ್ಟರು. ಆದ್ದರಿಂದ ಭಾರತೀಯ ಶಾಸನ ಪರಿವೀಕ್ಷಣ ಸಂಸ್ಥೆಗೆ ಅದರ ನಿರ್ದೇಶಕರಿಗೆ ಮತ್ತು ಡಾ. ಎಂ. ಎಂ. ಕಲಬುರ್ಗಿಯವರಿಗೆ ನಾನು ತುಂಬ ಋಣಿಯಾಗಿದ್ದೇನೆ.

ಕೇಂದ್ರ ಪುರಾತತ್ವ ಸಂಸ್ಥೆಯಿಂದ ನಾನು ಪ್ರತಿ ಮಾಡಿಕೊಂಡು ಬಂದ ಶಾಸನಗಳ ಪರಿಶೀಲನೆಗಾಗಿ ಮಾನ್ವಿ ತಾಲೂಕಿನ ಅನೇಕ ಊರುಗಳಿಗೆ ಭೇಟಿಕೊಟ್ಟೆನು. ನನ್ನ ಈ ಕ್ಷೇತ್ರಕಾರ್ಯದಲ್ಲಿ ಅಲ್ಲಿಯ ಶಾಸನಗಳ ಪಾಠಗಳನ್ನು ಬರೆದುಕೊಂಡು ಬಂದೆನು. ನನ್ನ ಪಾಠದೊಂದಿಗೆ ಸಂಸ್ಥೆಯ ಪಾಠಗಳನ್ನು ತಾಳೆ ನೋಡಿದೆನು. ಪ್ರಾಚ್ಯ ಸಂಸ್ಥೆಯ ಪಾಠಗಳಲ್ಲಿ ಕೈಬಿಟ್ಟಿದ್ದ ಅರಸರ ಬಿರುದುಗಳು, ಶಾಪಾಶಯ ಮೊದಲಾದ ಭಾಗಗಳನ್ನು ನನ್ನ ಸಂಗ್ರಹದ ಸಹಾಯದಿಂದ ತುಂಬಿಕೊಂಡೆನು. ಈಗ ಶಾಸನಗಳ ಪೂರ್ಣಪಾಠ ಸಿದ್ಧವಾಯಿತು. ಮುಂದೆ ಆಯಾ ಶಾಸನಗಳ ಸಾರಾಂಶವನ್ನು ಸ್ಥೂಲವಾಗಿ ಬರೆದು ಆರಂಭದಲ್ಲಿ ಜೋಡಿಸಿದೆನು.

ಪ್ರಸ್ತುತ 'ಮಾನ್ವಿ ತಾಲೂಕಿನ ಶಾಸನಗಳು' ಕೃತಿಯಲ್ಲಿ ೧೦೩ ಶಾಸನಗಳಿವೆ. ಇದರಲ್ಲಿ ಡಾ. ಪಿ. ಬಿ. ದೇಸಾಯಿ ಅವರು ಪ್ರಕಟಿಸಿದ ಮಾನ್ವಿಯ ಕ್ರಿ. ಶ. ೧೦೫೩ ರ ಶಾಸನ ಸೇರಿಲ್ಲ. ಇದಲ್ಲದೆ ಈ ತಾಲೂಕಿನ ಇನ್ನೂ ಸುಮಾರು ೮೦ ಶಾಸನಗಳು ಪ್ರಕಟಗೊಳ್ಳಬೇಕಾಗಿದೆ. ಅವೆಲ್ಲ ಪ್ರಕಟವಾದಾಗ ಮಾನ್ವಿ ತಾಲೂಕಿನ ಸಮಗ್ರ ಚರಿತ್ರೆ ಲಭ್ಯವಾಗುತ್ತದೆ. ಪ್ರಸ್ತುತ ಕೃತಿಯು ಅಂಥ ಪ್ರಯತ್ನಗಳಲ್ಲೊಂದಾಗಿದೆ.

ಮಾನ್ವಿ ತಾಲೂಕಿನ ಶಾಸನಗಳ ಪ್ರಕಟಣೆಯ ಬಗೆಗೆ ವಿಶೇಷ ಕಾಳಜಿವಹಿಸಿದವರು ಹಿರಿಯರಾದ ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠರು. ನನ್ನೊಂದಿಗೆ ಕ್ಷೇತ್ರಕಾರ್ಯದಲ್ಲಿ ಪಾಲ್ಗೊಂಡ ಸ್ನೇಹಿತರಾದ ಶಿವಕುಮಾರ ಕಿಲ್ಲಾ, ಶ್ರೀಶೈಲ ಜಾಲಿಹಾಳ ಮತ್ತು ಶರಣಬಸವ ಕರಡಕಲ್‌ರ ಉಪಕಾರವನ್ನು ಸ್ಮರಿಸುವುದು ನನ್ನ ಕರ್ತವ್ಯವಾಗಿದೆ. ಶಾಸನಗಳ ಹಸ್ತಪ್ರತಿಯನ್ನು ಸಿದ್ಧಪಡಿಸಿಕೊಟ್ಟ ಬಾಳಸಂಗಾತಿ ಶುಭಾ ಹಿರೇಮಠಳ ಸಹಾಯವನ್ನು ನೆನೆಯದಿರಲಾರೆ.

ಕನ್ನಡ ಸಾಹಿತ್ಯ ಪರಿಷತ್ತು ಕನಕಪುರ ಸಾಹಿತ್ಯ ಸಮ್ಮೇಳನದಲ್ಲಿ ೬೭ ಪುಸ್ತಕಗಳನ್ನು ಪ್ರಕಟಿಸಿಲು ನಿರ್ಧರಿಸಿದ್ದು ಸ್ತುತ್ಯಾರ್ಹವಾಗಿದೆ. ಅದರಲ್ಲಿ ನನ್ನ 'ಮಾನ್ವಿ ತಾಲೂ

ಕಿನ ಶಾಸನಗಳು' ಕೃತಿಯೂ ಆಯ್ಕೆಯಾದುದು ಸಂತೋಷವೆನಿಸಿದೆ. ನನ್ನ ಪುಸ್ತಕವನ್ನು ಆಯ್ಕೆ ಮಾಡಿದ ಪರಿಷತ್ತಿನ ಪ್ರಕಟಣ ಸಮಿತಿಯ ಸದಸ್ಯರಿಗೆ ನಾನು ಋಣಿಯಾಗಿದ್ದೇನೆ.

ಡಾ. ಚನ್ನಬಸವ ಹಿರೇಮಠ

ಪ್ರಸ್ತಾವನೆ

ಶಾಸನಗಳ ಅಧ್ಯಯನವು ಪಾಶ್ಚಾತ್ಯರು ನಮಗೆ ನೀಡಿದ ಮಹತ್ವದ ಕೊಡುಗೆಗಳಲ್ಲಿ ಒಂದು. ಇವರನ್ನು ಅನುಸರಿಸಿಕೊಂಡು ಅನೇಕ ಭಾರತೀಯ ವಿದ್ವಾಂಸರೂ ಈ ಕ್ಷೇತ್ರದಲ್ಲಿ ದುಡಿದಿದ್ದಾರೆ. ಕರ್ನಾಟಕದ ಇತರ ಭಾಗಗಳಿಗೆ ಹೋಲಿಸಿದರೆ ಹೈದ್ರಾಬಾದ್ ಕರ್ನಾಟಕದ ಶಾಸನಗಳ ಸಂಗ್ರಹ ಮತ್ತು ಪ್ರಕಟಣೆ ಅಷ್ಟೊಂದು ತೃಪಿಕರವಾಗಿಲ್ಲ. ಆದರೂ ಈ ದಿಸೆಯಲ್ಲಿ ಕೆಲವರು ಶ್ರಮವಹಿಸಿ ಕೆಲಸವನ್ನು ಮಾಡಿದ್ದಾರೆ.

ರಾಯಚೂರು ಜಿಲ್ಲೆಯ ಶಾಸನಗಳನ್ನು ಮೊತ್ತಮೊದಲಿಗೆ ಸಂಗ್ರಹಿಸಿದ ಕೀರ್ತಿ ಕರ್ನಲ್ ಮೆಕೆಂಝಿ ಅವರಿಗೆ ಸಲ್ಲುತ್ತದೆ. ಮುಂದೆ ವಾಲ್ಟರ್ ಇಲಿಯಟ್, ಎಚ್.ಕೃಷ್ಣಶಾಸ್ತ್ರಿ, ಆರ್.ಎಲ್. ಟರ್ನರ್, ಸಿ. ಆರ್. ಕೃಷ್ಣಮಾಚಾರಿ, ಡಾ. ಪಿ. ಬಿ. ದೇಸಾಯಿ ಮೊದಲಾದ ವಿದ್ವಾಂಸರು ಇಲ್ಲಿಯ ಅನೇಕ ಶಾಸನಗಳನ್ನು ಸಂಗ್ರಹಿಸಿ ಪ್ರಕಟಿಸಿದರು.

ಡಾ. ಶ್ರೀನಿವಾಸ ರಿತ್ತಿ ಅವರು ಕ್ರಿ.ಶ. ೧೯೫೭ ರಿಂದ ೧೯೬೪ ರವರೆಗೆ ರಾಯಚೂರು ಜಿಲ್ಲೆಯ ಲಿಂಗಸೂಗೂರು ಮತ್ತು ಮಾನ್ವಿ ತಾಲೂಕುಗಳಲ್ಲಿ ಸಂಚರಿಸಿ ಸುಮಾರು ೩೩೦ ಶಾಸನಗಳನ್ನು ಸಂಗ್ರಹಿಸಿದ್ದಾರೆ. ಈ ಶಾಸನಗಳ ಸಂಕ್ಷಿಪ್ತ ಪರಿಚಯ ಶಾಸನ ಇಲಾಖೆಯ ಆಯಾ ವರ್ಷಗಳ ವಾರ್ಷಿಕ ವರದಿಗಳಲ್ಲಿ ಪ್ರಕಟವಾಯಿತೇ ವಿನಃ ಅವುಗಳ ಪೂರ್ಣ ಪಾಠ ಪ್ರಕಟವಾಗಲಿಲ್ಲ. ಆದರೆ ಇವುಗಳಲ್ಲಿ ಲಿಂಗಸೂಗೂರು ತಾಲೂಕಿನ ನವಿಲೆ,[೧] ಕೀಲಾರಟ್ಟಿ[೨] ಮತ್ತು ಬನ್ನಿಗೋಳ[೩] ಶಾಸನಗಳು ಮಾತ್ರ ಪ್ರಕಟವಾಗಿವೆ.

ಕರ್ನಲ್ ಮೆಕಂಝಿ ಅವರು ಸಂಗ್ರಹಿಸಿದ ಶಾಸನಗಳಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿವುಗಳನ್ನು ಈಚೆಗೆ ಡಾ. ವಿ. ಶಿವಾನಂದ ಅವರು ಪ್ರಕಟಿಸಿದ್ದಾರೆ.[೪] ಇವುಗಳಲ್ಲಿ ರಾಯಚೂರು ಜಿಲ್ಲೆಯ ಶಾಸನಗಳೂ ಸೇರಿವೆ. ಅಲ್ಲದೆ ಡಾ. ಚನ್ನಬಸವ ಹಿರೇಮಠರ 'ಕುರುಗೋಡು ಸಿಂದರು- ಒಂದು ಅಧ್ಯಯನ ಕೃತಿಯಲ್ಲಿ ಸಿಂಧನೂರು ತಾಲೂಕಿನ ಕೆಲವು ಶಾಸನಗಳು ಪ್ರಕಟವಾಗಿವೆ.[೫] ಇತಿಹಾಸ ದರ್ಶನ ಮೊದಲಾದ ಗ್ರಂಥಗಳಲ್ಲಿ ಬಿಡಿ ಬಿಡಿಯಾಗಿ ಈ ಜಿಲ್ಲೆಯ ಕೆಲವು ಶಾಸನಗಳು ಪ್ರಕಟವಾಗಿವೆ. ಪ್ರಸ್ತುತ 'ಮಾನ್ವಿ ತಾಲೂಕಿನ ಶಾಸನಗಳು' ಪುಸ್ತಕವು ಈ ದಿಕ್ಕಿನಲ್ಲಿ ಹೊರಬಂದ ನೂತನ ಕೃತಿಯಾಗಿದೆ.

ರಾಜಕೀಯ ಇತಿಹಾಸ:

---

1. EI. xxxiv. No.25, ಕ್ರಿ. ಶ. 1014 ಎಪ್ರಿಲ್ 5
2. ಅದೇ. xxxv. No.2, ಕ್ರಿ. ಶ. 1046 ಡಿಸೆಂಬರ್ 24
3. ಅದೇ. xxxvi. No.16, ಕ್ರಿ. ಶ. 1025 ಅಕ್ಟೋಬರ್ 1
4. ಹೈದ್ರಾಬಾದು ಕರ್ನಾಟಕ ಪ್ರದೇಶದ ಕನ್ನಡ ಶಿಲಾಶಾಸನಗಳು, ವಾರಣಾಸಿ, 1992
5. ಕುರುಗೋಡು ಸಿಂದರು, ಕೊಪ್ಪಳ, ೧೯೯೫. ಅಲ್ಲದೆ ಇವರ 'ರಾಯಚೂರು-ಕೊಪ್ಪಳ ಜಿಲ್ಲೆಯ ಶಾಸನಗಳು' (ಮಸ್ಕಿ, ೧೯೯೯)ದಲ್ಲಿ ೫೮ ಶಾಸನಗಳು ಪ್ರಕಟವಾಗಿವೆ.

ಇಡೀ ಸಾಮ್ರಾಜ್ಯಕ್ಕೆ ಒಡೆಯರಾದವರು ಚಕ್ರವರ್ತಿಗಳು. ಇವರ ಕೆಳಗೆ ಮಹಾಮಂಡಳೇಶ್ವರರು ಮತ್ತು ಮಹಾಸಾಮಂತರು ವಿವಿಧ ಪ್ರಾಂತಗಳಲ್ಲಿ ಆಳುತ್ತಿದ್ದರು. ಇವರನ್ನು ಸಾಮಂತರು ಇಲ್ಲವೆ 'ಅರಸರು' ಎಂದು ಕರೆಯಬಹುದು. ಇವರು ವಂಶಪರಂಪರೆಯಾಗಿ ಮುಂದುವರೆಯುತ್ತಿದ್ದರು. ಮಾನ್ವಿ ತಾಲೂಕಿನ ಶಾಸನಗಳು ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಲಚುರಿ ಮತ್ತು ವಿಜಯನಗರದ ಚಕ್ರವರ್ತಿಗಳ ಆಳ್ವಿಕೆಯನ್ನು ಉಲ್ಲೇಖಿಸಿವೆ.

ಚಕ್ರವರ್ತಿಗಳು:

ರಾಷ್ಟ್ರಕೂಟರು:- ಬಾದಾಮಿ ಚಾಲುಕ್ಯರನ್ನು ಸರಿಸಿ ಕರ್ನಾಟಕದ ಆಳ್ವಿಕೆಯ ಚುಕ್ಕಾಣಿ ಹಿಡಿದವರು ರಾಷ್ಟ್ರಕೂಟರು. ಮಾನ್ವಿ ತಾಲೂಕಿನಲ್ಲಿ ಇವರ ಆಳ್ವಿಕೆಯನ್ನು ಉಲ್ಲೇಖಿಸುವ ಅತ್ಯಂತ ಪ್ರಾಚೀನ ಶಾಸನ (ಕ್ರಿ. ಶ. ೮೯೧) ಭೋಗಾವತಿ ಗ್ರಾಮದಲ್ಲಿದೆ[6]. ಈ ಅವಧಿಯಲ್ಲಿ ೨ನೇ ಕೃಷ್ಣನು ಆಳುತ್ತಿದ್ದನು. ಆದರೆ ಇದಕ್ಕೂ ಪೂರ್ವದ ಕುರಡಿ ಕ್ರಿ. ಶ. ೮೬೨ ಮತ್ತು ಬಾಲಗವಾಡ (ಕ್ರಿ. ಶ. ೮೭೮) ದ ಶಾಸನಗಳಲ್ಲಿ ಚಕ್ರವರ್ತಿಯ ಉಲ್ಲೇಖವಿಲ್ಲ. ಬಲ್ಲಟಗಿ (ಕ್ರಿ. ಶ. ೧೦ನೇ ಶತಮಾನ) ಮತ್ತು ನುಗಡೋಣಿ ಶಾಸನಗಳು ಕ್ರಮವಾಗಿ ಈ ವಂಶದ ನಿತ್ಯವರ್ಷ (೩ನೇ ಗೋವಿಂದ) ಹಾಗೂ ಕನ್ನರದೇವ (೩ನೇಕೃಷ್ಣ)ರ ಆಳ್ವಿಕೆಯನ್ನು ಉಲ್ಲೇಖಿಸಿವೆ. ಆದರೆ ೧೦ ನೇ ಶತಮಾನದಲ್ಲಿ ರಚನೆಯಾದ ಬಲ್ಲಟಗಿ, ಗೂಗೇಬಾಳ, ಪಡಪನದೊಡ್ಡಿ, ಸಿರಿವಾರ ಮತ್ತು ಮಾನ್ವಿಯ ಶಾಸನಗಳಲ್ಲಿ ಚಕ್ರವರ್ತಿಗಳ ಹೆಸರಿಲ್ಲ.

ಕಲ್ಯಾಣ ಚಾಲುಕ್ಯರು:- ಕಲ್ಯಾಣ ಚಾಲುಕ್ಯರ ಕಾಲದಲ್ಲಿ ರಾಯಚೂರು ಜಿಲ್ಲೆಯ ರಾಜಕೀಯವಾಗಿ ತುಂಬ ಮಹತ್ವವನ್ನು ಪಡೆಯಿತು. ಕ್ರಿ. ಶ. ೧೦೨೨ ರ ಬಲ್ಲಟಗಿ ಶಾಸನವು ಈ ವಂಶದ ಎರಡನೇ ಜಯಸಿಂಹನ ಆಳ್ವಿಕೆಯನ್ನು ಹೇಳಿದೆ. ಇದೂ ಸೇರಿ ಒಟ್ಟು ಏಳು ಶಾಸನಗಳು ಈತನ ಆಳ್ವಿಕೆಯನ್ನು ಉಲ್ಲೇಖಿಸಿವೆ. ಇವುಗಳಲ್ಲಿ ತಡಕಲ್ಲು ಶಾಸನವು (ಕ್ರಿ. ಶ. ೧೦೩೩) ಚಕ್ರವರ್ತಿಯು ಏತಗಿರಿಯ (ಇಂದಿನ ಯಾದಗಿರಿ) ನೆಲೆವೀಡಿನಲ್ಲಿದ್ದನೆಂದು ಹೇಳಿದೆ. ಆದರೆ ನುಗಡೋಣಿ ಶಾಸನವು (ಕ್ರಿ. ಶ. ೧೦೩೪) ಚಕ್ರವರ್ತಿಯನ್ನು ಹೆಸರಿಸದೆ ನೇರವಾಗಿ ಸೋಮಲದೇವಿಯನ್ನು ಉಲ್ಲೇಖಿಸಿದೆ. ಇವಳು ಜಯಸಿಂಹನ ರಾಣಿ ಎಂಬುದು ಬಲ್ಲಟಗಿಯ (೧೦೩೧) ಮತ್ತೊಂದು ಶಾಸನದಿಂದ ಖಚಿತವಾಗಿದೆ.

ಜಯಸಿಂಹನ ನಂತರ ಪಟ್ಟಕ್ಕೆ ಬಂದ ಮೊದಲನೇ ಸೋಮೇಶ್ವರನ ಆರು ಶಾಸನಗಳು ಇಲ್ಲಿವೆ. ಇವುಗಳಲ್ಲಿ ಮೂರು ಶಾಸನಗಳು ಆತನ ರಾಣಿಯರು ದತ್ತಿ ಬಿಟ್ಟುದನ್ನು ಉಲ್ಲೇಖಿಸಿವೆ. ಎರಡನೇ ಸೋಮೇಶ್ವರನ ಕಪಗಲ್ಲ ಶಾಸನ (೧೦೬೯) ವು ಈತನ

---

6. A.R.I.E.B. No. 551/61-62

ರಾಣಿ ಪಂಪಾದೇವಿಯನ್ನು ಉಲ್ಲೇಖಿಸಿದೆ. ಇವನ ಆಳ್ವಿಕೆಯ ಇನ್ನೆರಡು ಶಾಸನಗಳು ಆತನ ಸಾಮಂತ ಅರಸರು ದಾನ ಬಿಟ್ಟುದನ್ನು ಹೇಳಿವೆ.

ಚಾಲುಕ್ಯ ವಂಶದಲ್ಲಿ ಅತ್ಯಂತ ಪ್ರಸಿದ್ಧನಾದ ದೊರೆ ಆರನೆಯ ವಿಕ್ರಮಾದಿತ್ಯ ಸುಮಾರು ಐವತ್ತು ವರ್ಷಗಳ ಸುದೀರ್ಘ ಆಳ್ವಿಕೆಯಲ್ಲಿ ಅವನು ಬರೆಸಿದ ಶಾಸನಗಳ ಸಂಖ್ಯೆಯೂ ಸಾವಿರವನ್ನು ದಾಟಿವೆ. ಮಾನ್ವಿ ತಾಲೂಕಿನಲ್ಲಿ ಅವನ ಆಳ್ವಿಕೆಯನ್ನು ಉಲ್ಲೇಖಿಸುವ ೧೩ ಶಾಸನಗಳು ದೊರೆತಿವೆ. ಕಲ್ಲೂರ ಶಾಸನ (೧೦೯೭) ವು ಚಕ್ರವರ್ತಿಯು ನರ್ಮದಾ ನದಿಯ ತೀರದಲ್ಲಿ ಬೀಡುಬಿಟ್ಟಿದ್ದಾಗ ತನ್ನ ವಿದ್ಯಾಗುರುಗಳಾದ ಸರ್ವಕ್ರತು ಸೋಮಯಾಜೀಯರಿಗೆ ಕಲ್ಲೂರು ಗ್ರಾಮವನ್ನು 'ಪಂಚಲಾಂಗೊಲಕ್ರತು'ವಾಗಿ ಕೊಟ್ಟುದನ್ನು ಹೇಳಿದೆ.

ವಿಕ್ರಮಾದಿತ್ಯನ ನಂತರ ಮೂರನೇ ಸೋಮೇಶ್ವರ, ಎರಡನೇ ಜಗದೇಕಮಲ್ಲ ಮತ್ತು ಮೂರನೇ ತೈಲಪರು ಆಳ್ವಿಕೆಯನ್ನು ನಡೆಸಿದರು. ಮೂರನೆಯ ತೈಲಪನಿಗೆ 'ರಕ್ಕಸಗಂಗಿ' ಎಂಬ ಬಿರುದಿದ್ದುದು ಕಲ್ಲೂರು (೧೧೫೦) ಮತ್ತು ಬಲ್ಲಟಗಿ (೧೧೫೧) ಶಾಸನಗಳಿಂದ ತಿಳಿಯುತ್ತದೆ. ಈ ತೈಲಪನು ದುರ್ಬಲ ದೊರೆಯಾಗಿದ್ದರಿಂದ ಸಾಮ್ರಾಜ್ಯವನ್ನು ರಕ್ಷಿಸಿಕೊಂಡು ಬರುವುದು ಸಾಧ್ಯವಾಗಲಿಲ್ಲ. ಈ ಅವಕಾಶವನ್ನು ಬಳಸಿಕೊಂಡು ಕಲಚುರಿ ಬಿಜ್ಜಳನು ಸ್ವಯಂ ಚಕ್ರವರ್ತಿಯೆಂದು ಘೋಷಿಸಿಕೊಂಡನು. ಆದರೆ ಈ ಮನೆತನದವರೂ ತಮ್ಮ ಆಂತರಿಕ ಕಚ್ಚಾಟ, ಇತರ ಸಾಮಂತರ ಪ್ರಾಬಲ್ಯ ಮತ್ತು ಈ ಅವಧಿಯಲ್ಲಿ ನಡೆದ ಶಿವಶರಣರ ಆಂದೋಲನಗಳ ಪರಿಣಾಮವಾಗಿ ನಿರ್ನಾಮವಾಯಿತು. ಆಗ ಮತ್ತೆ ಕೆಲವು ವರ್ಷಗಳವರೆಗೆ ಚಾಲುಕ್ಯ ವಂಶದ ನಾಲ್ಕನೇ ಸೋಮೇಶ್ವರನು ಆಳ್ವಿಕೆಯನ್ನು ನಡೆಸಿದನು. ಮಾನ್ವಿ ತಾಲೂಕಿನಲ್ಲಿ ಕಲಚುರಿ ವಂಶದ ರಾಯಮುರಾರಿ ಸೋವಿದೇವ ಮತ್ತು ಚಾಲುಕ್ಯ ನಾಲ್ಕನೇ ಸೋಮೇಶ್ವರರ ಆಳ್ವಿಕೆಯ ಶಾಸನಗಳು ಲಭ್ಯವಾಗಿವೆ.

ವಿಜಯನಗರದ ಚಕ್ರವರ್ತಿಗಳಲ್ಲಿ ಕೃಷ್ಣದೇವರಾಯ ಮತ್ತು ಸದಾಶಿವರಾಯರ ಕಾಲದ ಒಂದೊಂದು ಶಾಸನಗಳು ಇಲ್ಲಿವೆ. ಈ ಮುಂದಿನ ಕಾಲಗಳಲ್ಲಿ ರಚನೆಯಾದ ಶಾಸನಗಳು ಗಾತ್ರದಲ್ಲಿ ಚಿಕ್ಕವಿದ್ದು, ಜನಸಾಮಾನ್ಯರು ವಿವಿಧ ದೇವಾಲಯಗಳಿಗೆ ದಾನಬಿಟ್ಟಿರುವುದನ್ನು ಉಲ್ಲೇಖಿಸುತ್ತವೆ. ಆದರೆ ಅವುಗಳಲ್ಲಿ ಹೆಚ್ಚಿನವು ತ್ರುಟಿತವಾಗಿವೆ. ಕೆಲವೊಮ್ಮೆ ಕಾಲನಿರ್ದೇಶನವನ್ನುಳಿದು ಇತರ ಅಂಶಗಳು ಸ್ಪಷ್ಟವಾಗುವುದಿಲ್ಲ.

ರಾಜಕುಮಾರರು:

ಚಕ್ರವರ್ತಿಗಳು ಬಹುವಲ್ಲಭರಾಗಿದ್ದರಿಂದ ಅನೇಕ ಪುತ್ರರನ್ನು ಅವರು ಪಡೆಯುತ್ತಿದ್ದರು. ಪಟ್ಟದರಾಣಿಯ ಹಿರಿಯ ಮಗ ಅಥವಾ ಚಕ್ರವರ್ತಿಯ ಹಿರಿಯ ತಮ್ಮ 'ಯುವರಾಜ' ನೆನಿಸಿದರೆ, ಉಳಿದವರು ಕೇವಲ ಕುಮಾರರಾಗಿ ರಾಜ್ಯದ ಆಡಳಿತದಲ್ಲಿ ಭಾಗವಹಿಸುತ್ತಿದ್ದರು. ರಾಜ್ಯದ ಆಡಳಿತದಲ್ಲಿ ಚಕ್ರವರ್ತಿ

ಮೊದಲಸ್ಥಾನದಲ್ಲಿದ್ದರೆ, ಯುವರಾಜನದು ಎರಡನೆಯದಾಗಿತ್ತು. ಇವರ ನಂತರದಲ್ಲಿ ಉಳಿದ ರಾಜಕುಮಾರರು 'ಕುಮಾರವೃತ್ತಿ'ಯಿಂದ ಆಳುತ್ತಿದ್ದರು.

ರಾಷ್ಟ್ರಕೂಟ ಎರಡನೇ ಕೃಷ್ಣನ ಆಳ್ವಿಕೆಯಲ್ಲಿ ಆತನ ಮಗ ಜಗತ್ತುಂಗನು ಎಡೆದೊರೆ-೨೦೦೦ ವಿಭಾಗವನ್ನು ಅಣುಗ ಜೀವಿತವಾಗಿ ಆಳುತ್ತಿದ್ದನೆಂದು ಭೋಗಾವತಿ ಶಾಸನ ಹೇಳಿದೆ.[೭] ತಂದೆಯ ಆಳ್ವಿಕೆಯಲ್ಲಿಯೇ ಅಕಾಲ ಮೃತ್ಯುವಿಗೆ ತುತ್ತಾದ ಜಗತ್ತುಂಗನು ಈ ಭಾಗವನ್ನಾಳುತ್ತಿದ್ದ ಸಂಗತಿ ಭೋಗಾವತಿ ಶಾಸನದಿಂದ ಮಾತ್ರವೇ ತಿಳಿಯುತ್ತದೆ.

ಚಾಲುಕ್ಯ ಆರನೇ ವಿಕ್ರಮಾದಿತ್ಯನ ಮಗನಾದ ಎರಡನೇ ತೈಲಪನ ಉಲ್ಲೇಖ ಕುರುಡಿ (೧೧೨೩) ಶಾಸನದಲ್ಲಿದೆ. ಮಹಾಮಂಡಳೇಶ್ವರನೆನಿಸಿದ್ದ ಅವನು ಬಹುಶಃ ಈ ಪ್ರದೇಶವನ್ನು (ಎಡದೊರೆ-೨೦೦೦) ಕುಮಾರವೃತ್ತಿಯಿಂದ ಆಳುತ್ತಿರಬೇಕು. ಕುರುಡಿಯ ಮತ್ತೊಂದು ಶಾಸನವು (೧೧೩೮) ಮೂರನೇ ಸೋಮೇಶ್ವರನ ಆಳ್ವಿಕೆಯಲ್ಲಿ ಆತನ ಮಗನಾದ ಮೂರನೇ ತೈಲಪನು ಅಗ್ರಹಾರ ರಾರಾವಿಯಲ್ಲಿ ಒಂದು ವೃತ್ತಿಯನ್ನು ನಾಗಲದೇವಿ ಮಾಡಿಸಿದ ದೇವಾಲಯಕ್ಕೆ ದಾನ ನೀಡಿದನೆಂದು ಹೇಳಿದೆ. ಇಲ್ಲಿಯ ರಾರಾವಿಯು ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲೂಕಿನ ರಾರಾವಿಯಾಗಿರಬೇಕೆ? ಅಥವಾ ಮಾನ್ವಿ ತಾಲೂಕಿನಲ್ಲಿ ಆ ಹೆಸರಿನ ಒಂದು ಊರು ಇದ್ದಿತೇ? ಶೋಧಿಸಬೇಕಾಗಿದೆ. ಅದೇನೇ ಇರಲಿ ಮೂರನೇ ತೈಲಪನು ತಂದೆಯ ಆಳ್ವಿಕೆಯಲ್ಲಿ ರಾಜಕುಮಾರನಾಗಿ ಆಳುತ್ತಿದ್ದುದು ಮಾತ್ರ ಸ್ಪಷ್ಟವಾಗಿದೆ.

ರಾಣಿಯರು: ರಾಜನು ಬಹುಪತ್ನಿಯರನ್ನು ಹೊಂದಿರುವುದು ವೈಭವದ ಸಂಕೇತವಾಗಿತ್ತು. ರಾಜಕೀಯ ಭದ್ರತೆಗಾಗಿ, ಮೊದಲನೇ ಹೆಂಡತಿಗೆ ಸಂತಾನ ವಿಲ್ಲದುದಕ್ಕಾಗಿ ಬಹುಪತ್ನಿತ್ವ ರೂಢಿಯಲ್ಲಿದ್ದಿತು. ರಾಣಿಯರಲ್ಲಿ ಪಿರಿಯರಸಿ, ಪಟ್ಟಮಹಾದೇವಿ ಮತ್ತು ರಾಣಿಯರೆಂಬ ಮೂರು ಗುಂಪುಗಳಿದ್ದುದನ್ನು ಕಾಣುತ್ತೇವೆ. ರಾಣಿಯರು ಪ್ರಭುವರ್ಗದ ಪ್ರಮುಖ ವ್ಯಕ್ತಿಗಳಾಗಿದ್ದರೂ ಅವರು 'ಯುವರಾಜ' ಮತ್ತು ಇತರ 'ರಾಜಕುಮಾರ'ರಂತೆ ರಾಜ್ಯದ ಬೇರೆ ಬೇರೆ ವಿಭಾಗಗಳನ್ನು ಆಳುತ್ತಿರಲಿಲ್ಲ. ಬದಲಾಗಿ ಕೆಲವು ಬಿಡಿಬಿಡಿಯಾದ ಅಗ್ರಹಾರ ಇಲ್ಲವೆ ಭತ್ತಗ್ರಾಮಗಳನ್ನು ಮಾತ್ರ ಆಳುತ್ತಿದ್ದರು.

ಮಾನ್ವಿ ತಾಲೂಕಿನ ಶಾಸನಗಳಲ್ಲಿ ಕಾಣಿಸಿಕೊಳ್ಳುವ ರಾಣಿಯರು ಕೇವಲ ದತ್ತಿ ಬಿಡುವಷ್ಟಕ್ಕೆ ಸೀಮಿತರಾಗಿದ್ದಾರೆ. ಅವರು ಇಲ್ಲಿಯ ಅನೇಕ ಅಗ್ರಹಾರಗಳ ಬ್ರಾಹ್ಮಣರಿಗೆ ಮತ್ತು ದೇವಾಲಯಗಳಿಗೆ ದತ್ತಿಯನ್ನು ನೀಡಿದ್ದಾರೆ. ಈ ಅಗ್ರಹಾರಗಳು ಅವರ ಆಳ್ವಿಕೆಗೆ ಸೇರಿದದುದನ್ನು ಶಾಸನಗಳು ಉಲ್ಲೇಖಿಸುವುದಿಲ್ಲ. ಆದ್ದರಿಂದ ಅವರು ಇಲ್ಲಿಯ ಯಾವ ಅಗ್ರಹಾರಗಳನ್ನು ಆಳುತ್ತಿರಲಿಲ್ಲವೆಂದು ಹೇಳಬೇಕಾಗುತ್ತದೆ.

ಚಾಲುಕ್ಯ ಎರಡನೇ ಜಯಸಿಂಹನ ರಾಣಿ ಮಹಾದೇವಿಯ ಉಲ್ಲೇಖ ಬಲ್ಲಟಗಿ

---

7. A.R.I.E.B. No. 551/61-62

(೧೦೨೨) ಶಾಸನದಲ್ಲಿದೆ. ಅವಳು ಬಲ್ಲಟಗಿಯ ತ್ರೈಪುರುಷ ದೇವಾಲಯಕ್ಕೆ ಲೋಕಾದಿತ್ಯ (ಅಯ್ಯಣವಾಡಿ-೩೦೦ರ ಮನ್ನೆಯ)ನಿಂದ ಭೂಮಿಯನ್ನು ಪಡೆದು ದಾನ ಬಿಟ್ಟಿದ್ದಾಳೆ. ಈತನ ಮತ್ತೊಬ್ಬ ರಾಣಿ ಸೋಮಲದೇವಿಯ ಉಲ್ಲೇಖ ಬಲ್ಲಟಗಿಯ ಎರಡು (ಕ್ರಿ.ಶ. ೧೦೨೯ ಮತ್ತು ಕ್ರಿ. ಶ. ೧೦೩೧) ಮತ್ತು ನುಗಡೋಣಿ (೧೦೩೪) ಯ ಒಂದು ಶಾಸನದಲ್ಲಿದೆ. ಅವಳು ಕ್ರಮವಾಗಿ ಬಸದಿಗೂ ಮತ್ತು ದಿಗ್ಗಿಗೆ (ಸಿಂಧನೂರು ತಾಲೂಕಿನ ದಿದ್ದಿಗೆ)ಯ ಮಧುಸೂದನಭಟ್ಟರಿಗೂ ದಾನ ನೀಡಿದ್ದಾಳೆ. ಈ ಜಯಸಿಂಹನ ಮತ್ತೊಬ್ಬ ರಾಣಿ ಬಿಜ್ಜಲದೇವಿಯು ಸುಂಕನೂರು (ಕ್ರಿ.ಶ. ೧೦೩೧) ಮತ್ತು ತಡಕಲ್ಲು (೧೦೩೩) ಶಾಸನಗಳಲ್ಲಿ ಕಾಣಿಸಿಕೊಂಡಿದ್ದಾಳೆ.

ಬಲ್ಲಟಗಿ (ಕ್ರಿ.ಶ. ೧೦೫೮) ಶಾಸನದಲ್ಲಿ ಮೊದಲನೇ ಸೋಮೇಶ್ವರನ ರಾಣಿ ಚಾಮಲದೇವಿಯ ಉಲ್ಲೇಖವಿದೆ. ಬಾಗಲವಾಡ (ಕ್ರಿ. ಶ. ೧೦೫೩) ಮತ್ತು ಬಲ್ಲಟಗಿ (ಶಾಸನ ಸಂಖ್ಯೆ ೨೪) ಶಾಸನಗಳಲ್ಲಿ ಈತನ ರಾಣಿಯರ ಅಸ್ಪಷ್ಟ ಉಲ್ಲೇಖವಿದೆ. ಇನ್ನು ಚಾಲುಕ್ಯ ಎರಡನೇ ಸೋಮೇಶ್ವರನಿಗೆ ಪಂಪಾದೇವಿ ಹೆಸರಿನ ರಾಣಿಯಿದ್ದ ಸಂಗತಿ ಕಪಗಲ್ಲು ಶಾಸನದಿಂದ (ಕ್ರಿ. ಶ. ೧೦೬೯) ತಿಳಿಯುತ್ತದೆ. ಆರನೇ ವಿಕ್ರಮಾದಿತ್ಯನ ರಾಣಿ ಚಂದಲದೇವಿಯು ಬಲ್ಲಟಗಿಯ ಎರಡು ಶಾಸನ (ಕ್ರಿ. ಶ. ೧೧೦೬ ಮತ್ತು ಕ್ರಿ. ಶ. ೧೧೧೬) ಗಳಲ್ಲಿ ಕಾಣಿಸಿಕೊಂಡಿದ್ದಾಳೆ. ಇದಲ್ಲದೆ ಕೃಷ್ಣದೇವರಾಯನ ಇಬ್ಬರು ರಾಣಿಯರಾದ ಚಿನ್ನದೇವಿ ಮತ್ತು ತಿರುಮಲದೇವಿಯರ ಉಲ್ಲೇಖ ಚೀಕಲಪರ್ವಿ ಶಾಸನ (ಕ್ರಿ.ಶ. ೧೫೨೧) ದಲ್ಲಿದೆ.

ಚಕ್ರವರ್ತಿಯು ತನ್ನ ಬೇರೆ ಬೇರೆ ರಾಣಿಯರಿಗೆ ಅಗ್ರಹಾರಗಳ ಮೇಲ್ವಿಚಾರಣೆ ನೋಡಿಕೊಳ್ಳಲು ನೇಮಿಸುತ್ತಿದ್ದನು. ಇದರಲ್ಲಿ ಅವರ ಸುರಕ್ಷತೆಯೊಂದಿಗೆ ಸವತಿ ಮತ್ಸರದಿಂದ ಅವರನ್ನು ದೂರವಿಡುವ ಉಪಾಯವೂ ಅಡಗಿದಂತಿದೆ. ಶಾಸನಗಳಲ್ಲಿ ಉಕ್ತವಾದ ರಾಣಿಯರ ನೆಲೆವೀಡುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ವಿಷಯ ಮನದಟ್ಟಾಗುತ್ತದೆ. ಉದಾಹರಣೆಗೆ ಹಿಂದೆಯೇ ನೋಡಿದಂತೆ ಚಾಲುಕ್ಯ ಎರಡನೇ ಜಯಸಿಂಹನ ಮೂವರು ರಾಣಿಯರ ಉಲ್ಲೇಖ ಮಾನ್ವಿ ತಾಲೂಕಿನ ಶಾಸನಗಳಲ್ಲಿದೆ. ಅವರಲ್ಲಿ ಸೋಮಲದೇವಿಯು ಕ್ರಿ. ಶ. ೧೦೩೧ರಲ್ಲಿ ಏತಗಿರಿ (ಯಾದಗಿರಿ)ಯ ನೆಲೆವೀಡಿನಲ್ಲಿದ್ದರೆ, ಬಿಜ್ಜಲದೇವಿಯು ಕ್ರಿ. ಶ. ೧೦೩೧ ರಲ್ಲಿ ಪೊಟ್ಟಳಕೆರೆಯ ನೆಲೆವೀಡಿನಲ್ಲಿದ್ದಳು. ಆದರೆ ಈ ಬಿಜ್ಜಳ ದೇವಿಯು ಏತಗಿರಿಯ ನೆಲೆವೀಡಿನಲ್ಲಿದ್ದಳು. ಇನ್ನು ಮಹಾದೇವಿಯು ಕ್ರಿ. ಶ. ೧೦೨೨ರಲ್ಲಿ ಪುವ್ವರವಳ್ಳಿಯ (ಯುದ್ಧದ ಕಾಲಕ್ಕೆ) ನೆಲೆವೀಡಿನಲ್ಲಿದ್ದರೆ, ಕ್ರಿ. ಶ. ೧೦೨೯ರಲ್ಲಿ ಸೋಮಲದೇವಿಯು ಪನ್ನಿರ್ಕೆಯಪ್ಪಯಣ (ಅಪ್ಪಯಣ=ಯುದ್ಧಕಾಲಕ್ಕೆ) ದ ನೆಲೆವೀಡಿನಲ್ಲಿದ್ದಳು. ಅಂದರೆ ಚಕ್ರವರ್ತಿಯು ಒಂದೊಂದು ಯುದ್ಧಕ್ಕೆ ಹೋದಾಗ ಅವನ ಜೊತೆಗೆ ಬೇರೆ ಬೇರೆ ರಾಣಿಯರು ತೆರುಳುತ್ತಿದ್ದದನ್ನು ಇವು ಸೂಚಿಸುತ್ತವೆ. ಆಗ ಉಳಿದವರು ಸುರಕ್ಷತೆಯ ದೃಷ್ಟಿಯಿಂದ ಅಗ್ರಹಾರಗಳಲ್ಲಿರುತ್ತಿರಬೇಕು. ಆದ್ದರಿಂದ ಪ್ರಾಚೀನ ಕರ್ನಾಟಕ ಎಲ್ಲ ರಾಣಿಯರ ನೆಲೆವೀಡುಗಳನ್ನು

ಸೂಕ್ಷ್ಮವಾಗಿ ಅಭ್ಯಾಸ ಮಾಡಬೇಕಾಗಿದೆ. ಆಗ ಚಕ್ರವರ್ತಿಗಳ ಚಲನವಲನ ಮತ್ತು ರಾಣಿಯರ ವಿಭಿನ್ನ ಮನೋಧರ್ಮದ ಸೂಕ್ಷ್ಮ ಪದರುಗಳು ಅನಾವರಣಗೊಳ್ಳುವವು.

ಸಾಮಂತ ಅರಸರು:

ವಿವಿಧ ಪ್ರಾಂತಗಳಿಗೆ ಒಡೆಯರಾಗಿ ಆಳುತ್ತಿದ್ದವರು ಸಾಮಂತರು. ಆಳುವ ದೃಷ್ಟಿಯಿಂದ ಇವರು ಸ್ವತಂತ್ರರಾಗಿದ್ದರೂ ತಮ್ಮ ಮೇಲಿನ ಒಡೆಯವರಿಗೆ ನಿಷ್ಠೆಯಿಂದ ಇರಬೇಕಾಗಿತ್ತು. ಕಾಲಕಾಲಕ್ಕೆ ಕಪ್ಪ ಕಾಣಿಕೆಗಳನ್ನು ಸಲ್ಲಿಸುವುದರ ಜೊತೆಗೆ ಚಕ್ರವರ್ತಿಯು ಯುದ್ಧಕ್ಕೆ ಹೊರಟಾಗ ಸೈನ್ಯದ ನೆರವನ್ನು ಒದಗಿಸಬೇಕಾಗಿತ್ತು. ತಮ್ಮ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಮನ್ನಯರಾಗಿದ್ದ ಮಹಾಸಾಮಂತ-ಮಹಾಮಂಡಳೇಶ್ವರಾಗಿ ಪದೋನ್ನತಿಯನ್ನು ಪಡೆಯುತ್ತಿದ್ದರು.

ಎಡೆದೊರೆನಾಡಿನ ಹೈಹಯರು: ಹೈಹಯ ವಂಶದ ಒಂದು ಶಾಖೆಯ ಪ್ರಾಚೀನ ಎಡೆದೊರೆ ನಾಡನ್ನು ಆಳುತ್ತಿತ್ತು. ಈ ಶಾಖೆಯ ಮೂಲ ಪುರುಷನ ಬಗ್ಗೆ ಇಲ್ಲಿಯ ಶಾಸನಗಳು ಯಾವ ಮಾಹಿತಿಯನ್ನೂ ನೀಡುವುದಿಲ್ಲ. ಡಾ. ಫ್ಲೀಟರು ಕೆಂಭಾವಿಯ ಕ್ರಿ. ಶ. ೧೦೫೪ರ ಶಾಸನದ ಸಹಾಯದಿಂದ ಈ ವಂಶದ ಪ್ರಾಚೀನ ಅರಸರನ್ನು ಗುರುತಿಸಲು ಪ್ರಯತ್ನಿಸಿದ್ದಾರೆ.[೮] ಒಂದನೆಯ ಚಂದನ ಮಗ ನಿಂಬರಸ. ಇವನ ಮಗ ಎರಡನೆಯ ಚಂದ. ಈತನ ಮಗನೇ ರೇವರಸ. ಈ ರೇವರಸನ ಉಲ್ಲೇಖ ಕ್ರಿ. ಶ. ೧೦೫೪ರ ಮಾನ್ವಿ ಶಾಸನದಲ್ಲಿದೆ.[೯] ಅವನು ಎಡೆದೊರೆ ನಾಡನ್ನು ಆಳುತ್ತಿದ್ದನು.

ಮಹಾಮಂಡಲೇಶ್ವರ ರೇವರಸನು 'ಮೂವಡಿಗಂಡ, ಕಾರ್ತ್ಯವೀರ್ಯ ಕುಳತಿಳಕ, ಮಂಡಳಿಕ ಭೀಮ, ರಾಯ, ಕಟಕ ಮುನ್ನಿರಿವ' ಮೊದಲಾದ ಪ್ರಶಸ್ತಿಗಳನ್ನು (ಮಾನ್ವಿ. ಶಾಸನ ಸಂಖ್ಯೆ ೨೨) ಧರಿಸಿದ್ದನು. ಅತನೂರು ಶಾಸನವೂ ಅವನು ಎಡೆದೊರೆ-೨೦೦೦ ವಿಭಾಗವನ್ನು ಆಳುತ್ತಿದ್ದನೆಂದು ಹೇಳಿದೆ. ಮುಂದೆ ಈ ವಿಭಾಗವನ್ನು ಜೋಯಿಮರಸ (ಗೊಬ್ಬೂರು-೧೦೮೫; ಗುತ್ತಿ-೧೦೮೫)ನು ಆಳಿದನು. ಬಾಗಲವಾಡ ಶಾಸನವು (ಕ್ರಿ. ಶ. ೧೦೯೬) ಈ ವಂಶದ ಮಹಾಮಂಡಳೇಶ್ವರ ಅಯ್ಯಣದೇವನನ್ನು ಉಲ್ಲೇಖಿಸಿದೆ. ಆದರೆ ಅವನ ಆಳ್ವಿಕೆಯ ಪ್ರದೇಶವನ್ನು ಶಾಸನವು ಹೇಳಿಲ್ಲ.

ಸಿಂಧನೂರು ತಾಲೂಕಿನ ದೇವರಗುಡಿ ಶಾಸನವು (ಕ್ರಿ. ಶ. ೧೧೦೧) ಮಹಾಮಂಡಳೇಶ್ವರ ದಶವರ್ಮನು ಎಡೆದೊರೆ ನಾಡನ್ನು ಆಳುತ್ತಿದ್ದನೆಂದು ಹೇಳಿದೆ.[೧೦] ಶಾಸನದಲ್ಲಿ ಈ ದಶವರ್ಮನ ವಂಶವನ್ನು ಹೇಳಿಲ್ಲ. ಬಹುಶಃ ಅವನೂ ಹೈಹಯ ವಂಶದವನಾಗಿದ್ದು, ತಂದೆಯ ನಂತರ ಈ ಪ್ರದೇಶವನ್ನು ಆಳುತ್ತಿರಬೇಕು.

---

8. EI. xii. P.269-291

9. ಇವನ ಉಲ್ಲೇಖ ಮಾನ್ವಿಯ ಕ್ರಿ. ಶ. ೧೦೫೨ ರ ಶಾಸನದಲ್ಲಿಯೂ ಇದೆ. ವಿವರಗಳಿಗೆ ನೋಡಿ Hydrabad Archealogical Series No. 18 (Ed) Dr. P. B. Desai, No.5

10. ಕುರುಗೋಡುಸಿಂದರು-ಒಂದು ಅಧ್ಯಯನ ಪು. 333

ಇತರ ಸಾಮಂತರು: ರಾಷ್ಟ್ರಕೂಟ ಮೂರನೇ ಇಂದ್ರನ ಸಾಮಂತನೊಬ್ಬನ ಅಸ್ಪಷ್ಟ ಉಲ್ಲೇಖ ಬಲ್ಲಟಗಿ ಶಾಸನದಲ್ಲಿದೆ. ಅಯ್ಯಣವಾಡಿ-೩೦೦ರ ಮನ್ನೆಯ ಲೋಕಾದಿತ್ಯನ ಉಲ್ಲೇಖ ಬಲ್ಲಟಗಿ (ಕ್ರಿ. ಶ. ೧೦೨೨) ಶಾಸನದಲ್ಲಿದೆ. ಬಲ್ಲಟಗಿಯ ಮತ್ತೊಂದು ಶಾಸನ (ಕ್ರಿ. ಶ. ೧೦೩೬)ವು 'ವಾದಿಗಾ ಗಜಕೇಸರಿ, ಸದ್ಯೋಜಾತ'- ಮೊದಲಾದ ಬಿರುದಿನ ವ್ಯಕ್ತಿಯೊಬ್ಬನ ಆಳ್ವಿಕೆಯನ್ನು ಹೇಳಿದೆ. ಶಾಸನವು ತ್ರುಟಿತವಾಗಿರುವುದರಿಂದ ಆತನ ಹೆಸರು ಮತ್ತು ಆಳ್ವಿಕೆಯ ಪ್ರದೇಶವು ತಿಳಯುವುದಿಲ್ಲ. ಮರ್ಚೇಡ ಶಾಸನವು (ಕ್ರಿ. ಶ. ೧೦೪೫) ಮಹಾಸಾಮಂತ ದೊರವಡಿಯ ವಾಮರಸನನ್ನು ಉಲ್ಲೇಖಿಸಿದೆ. ಅವನು ಹಂಡುಗ ಬೀಡಿನಲ್ಲಿದ್ದಾಗ ಬೀವಯ್ಯನೊಂದಿಗೆ ದತ್ತಿ ಬಿಟ್ಟಿದ್ದಾನೆ.

ಹೈಹಯ ವಂಶದ ಮಹಾಸಾಮಂತ-ಮನ್ನೆಯ ಅಂಗ್ಯಪರಸನ ಉಲ್ಲೇಖ ಅತನೂರು ಶಾಸನ (ಕ್ರಿ. ಶ. ೧೧ನೇ ಶತಮಾನ) ದಲ್ಲಿದೆ. ಅವನು ಯಾವ ವಿಭಾಗವನ್ನು ಆಳುತ್ತಿದ್ದನೆಂಬುದು ಶಾಸನದಿಂದ ತಿಳಿಯುವುದಿಲ್ಲ. ಎಡೆದೊರೆ ನಾಡನ್ನು ಆಳುತ್ತಿದ್ದ ಮಹಾಮಂಡಳೇಶ್ವರ ರೇವರಸನ ಕೆಳಗೆ ಇವನ ಉಲ್ಲೇಖವಿದೆ. ಆದ್ದರಿಂದ ಅವನು ಈ ನಾಡಿನ ಯಾವುದೊ ಒಂದು ಉಪವಿಭಾಗವನ್ನು ಆಳುತ್ತಿರಬೇಕು. ಅಲ್ಲದೆ ಇದೇ ಶಾಸನ ಉಲ್ಲೇಖಿಸುವ ಜಕ್ಕರಸನೂ ಸಾಮಂತ ಅರಸನಾಗಿರಬೇಕು.

ಚಾಲುಕ್ಯ ಎರಡನೇ ಸೋಮೇಶ್ವರನ ಸಾಮಂತ ಮಹಾಮಂಡಳೇಶ್ವರ ಪೆಡೆಕಲು ಜಟಾಚೋಳ ಭೀಮ ಮಹಾರಾಜನ ಉಲ್ಲೇಖ ದದ್ದಲ ಶಾಸನ (ಕ್ರಿ. ಶ. ೧೦೬೯) ದಲ್ಲಿದೆ. ಅವನು ಬಹುಶಃ ಪೆಡೆಕಲು ವಿಭಾಗವನ್ನು ಆಳುತ್ತಿರಬೇಕು. ಅದು ಇಂದಿನ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ದ್ರೋಣಾಚಲಂ ತಾಲೂಕಿನ ಪೆಡಕಲು ಗ್ರಾಮವಾಗಿದೆ. ಚೋಳರು ಚಾಲುಕ್ಯರ ಸಾಮಂತರಾಗಿ ಪೆಡಕಲು-೮೦೦ ವಿಭಾಗವನ್ನು ಆಳುತ್ತಿದ್ದುದು ಅಲ್ಲಿಯ ಶಾಸನಗಳಿಂದ ತಿಳಿಯುತ್ತದೆ[11]. ಇದೇ ಶಾಸನವು ಹೈಹಯ ವಂಶದ ಮಹಾಸಾಮಂತ ಮಾನುವೆಯ ಮಳೆಯಮರಸನನ್ನು ಉಲ್ಲೇಖಿಸಿದೆ. ಆದರೆ ಅವನು ಯಾವ ವಿಭಾಗವನ್ನು ಆಳುತ್ತಿದ್ದನೆಂಬುದು ಶಾಸನದಿಂದ ತಿಳಿಯುವುದಿಲ್ಲ.

ಕಲ್ಲೂರು ಶಾಸನವು (ಕ್ರಿ. ಶ. ೧೦೯೭) ಹೈಹಯ ವಂಶದ ಮಹಾಮಂಡಳೇಶ್ವರ ಚಂದರಸನನ್ನು ಉಲ್ಲೇಖಿಸಿದೆ. ಆದರೆ ಇವನು ಯಾವ ವಿಭಾಗವನ್ನಾಳುತ್ತಿದ್ದನೆಂಬುದು ಶಾಸನದಿಂದ ತಿಳಿಯುವುದಿಲ್ಲ. ಈ ಗ್ರಾಮವನ್ನು ಆರನೇ ವಿಕ್ರಮಾದಿತ್ಯನು ತನ್ನ ಗುರುಗಳಿಗೆ ದತ್ತಿಯಾಗಿ ನರ್ಮದಾ ನದಿ ತೀರದಿಂದಲೇ ನೀಡುತ್ತಾನೆ. ಆಗ ಚಂದರಸನೂ ಆ ಊರನ್ನು ಬ್ರಾಹ್ಮಣರಿಗೆ ನೀಡಿದನೆಂದು ಶಾಸನ ಹೇಳುತ್ತದ. ಇವನ 'ಅಯ್ಯಣಾದಿತ್ಯ' ವೆಂಬ ಬಿರುದು ಅವನು ಅಯ್ಯಣದೇವನ ಮಗನೆಂಬುದನ್ನು ಸೂಚಿಸುತ್ತಿರಬೇಕು. ಆದ್ದರಿಂದ ಅಯ್ಯಣದೇವನ ನಂತರ ಆತನ ಮಗನಾದ ಚಂದರಸನು ಆಳಿದನೆಂದು ಹೇಳಬೇಕಾಗುತ್ತದೆ.

---

11. ಜೆ. ಎಂ. ನಾಗಯ್ಯ, ಆರನೇ ವಿಕ್ರಮಾದಿತ್ಯನ ಶಾಸನಗಳು, ಬೆಳಗಾವಿ, ೧೯೯೨, ಪು.೧೨೮ ಮತ್ತು ೨೦೧

ಬಲ್ಲಟಗಿಯ ಶಾಸನ (ಕ್ರಿ. ಶ. ೧೧೫೧) ವು ಹೈಹಯ ವಂಶದ ಮಹಾ ಮಂಡಳೇಶ್ವರ ಘಟ್ಟಿದೇವರಸನನ್ನು ಉಲ್ಲೇಖಿಸಿದೆ. ಇವನು ಯಾವ ವಿಭಾಗವನ್ನು ಆಳುತ್ತಿದ್ದನೆಂಬುದು ಶಾಸನದಿಂದ ತಿಳಿಯುವುದಿಲ್ಲ. ಈ ಘಟ್ಟಿದೇವನು ಅನ್ಯಾಂಗನ ಮಗನೆಂದು ಶಾಸನವು ಹೇಳಿದೆ. ಬಾಗಲವಾಡ ಶಾಸನ (ಕ್ರಿ. ಶ. ೧೦೮೦) ದಲ್ಲಿ ಮಹಾಮಂಡಳೇಶ್ವರ ಬೂಚಿದೇವರಸನ ಉಲ್ಲೇಖವಿದೆ. ಆದರೆ ಇವನು ಯಾವ ವಂಶಕ್ಕೆ ಸೇರಿದವನೆಂಬುದು ಶಾಸನದಿಂದ ತಿಳಿಯುವುದಿಲ್ಲ. ಕಲ್ಲೂರು ಶಾಸನವೂ (ಕ್ರಿ. ಶ. ೧೧೩೫) ಹೈಹಯ ವಂಶದ ಮಹಾಮಂಡಳೇಶ್ವರ ಬೂಚಿದೇವರಸನು ಮುದುಗುಂದೂರು-೩೦೦ನ್ನು ಆಳುತ್ತಿದ್ದನೆಂದು ಹೇಳಿದೆ. ಆದ್ದರಿಂದ ಬಾಗಲವಾಡ ಶಾಸನೋಕ್ತ ಬೂಚಿದೇವನೂ ಹೈಹಯ ವಂಶಕ್ಕೆ ಸೇರಿರಬೇಕು. ಕಲ್ಲೂರು ಶಾಸನದ ಬೂಚಿದೇವನನ್ನು 'ಅಯ್ಯಣಾದಿತ್ಯ' ಎಂದು ಕರೆಯಲಾಗಿದೆ. ಈ ಅಯ್ಯಣನು ಬೂಚಿದೇವನ ತಂದೆಯಾಗಿರಬೇಕು. ಕಲ್ಲೂರಿನ ಕ್ರಿ. ಶ. ೧೧೪೩ ಮತ್ತು ಕ್ರಿ. ಶ. ೧೧೫೦ರ ಶಾಸನಗಳಲ್ಲಿ ಮಹಾಮಂಡಳೇಶ್ವರ ಬೂಚಿದೇವನ ಉಲ್ಲೇಖವಿದೆ. ಇವನು ಮೇಲೆ ನೋಡಿದ ಮುದುಗುಂದೂರು ನಾಡಿನ ಅರಸನೇ ಆಗಿರಬೇಕು.

ಬಾಗಲವಾಡ ಶಾಸನ (ಕ್ರಿ.ಶ. ೧೦೯೬) ಉಲ್ಲೇಖಿಸುವ ಅಯ್ಯಣದೇವನನ್ನೇ ಮೇಲಿನ ಕಲ್ಲೂರು ಮತ್ತು ಬಲ್ಲಟಗಿ ಶಾಸನಗಳು ಹೇಳುತ್ತಿರಬೇಕು. ಇದು ನಿಜವಾದರೆ ಈ ಅಯ್ಯಣದೇವನು ಮುದುಗುಂದೂರು-೩೦೦ ಪ್ರದೇಶದ ಮೂಲ ಪುರುಷನಾಗಿದ್ದಾನೆ. ಆದರೆ ಅವನಿಗೂ ಮತ್ತು ಎಡದೊರೆ-೨೦೦೦ ವನ್ನು ಆಳುತ್ತಿದ್ದ ಹೈಹಯ ಅರಸರ ನಡುವಿನ ಸಂಬಂಧವು ತಿಳಿಯುವುದಿಲ್ಲ.

ಚಾಲುಕ್ಯ ಜಗದೇಕಮಲ್ಲನ ಆಳ್ವಿಕೆಯ ಬಲ್ಲಟಗಿ ಮತ್ತು ಮಾನ್ವಿ ಶಾಸನಗಳು ಕ್ರಮವಾಗಿ ಹೈಹಯ ವಂಶದ ಮಹಾಸಾಮಂತ ಲೋಕರಸ ಹಾಗೂ ಗಂಡರಾದಿತ್ಯರನ್ನು ಉಲ್ಲೇಖಿಸಿವೆ. ಆದರೆ ಅವರು ಯಾವ ವಿಭಾಗವನ್ನು ಆಳುತ್ತಿದ್ದರೆಂಬುದು ಶಾಸನಗಳಿಂದ ತಿಳಿಯುವುದಿಲ್ಲ. ಹಿರೆಕೊಟ್ನೆಕಲ್ಲು ಶಾಸನವೂ (ಕ್ರಿ. ಶ. ೧೧೯೧) ಈ ವಂಶದ ಮಹಾಮಂಡಳೇಶ್ವರ ಮಾನುವೆಯ ಮೈಳುಗಿ ದೇವರಸನನ್ನು ಉಲ್ಲೇಖಿಸಿದೆ. ಅವನ ಆಳ್ವಿಕೆಯ ವಿವರಗಳೂ ತಿಳಿಯುವುದಿಲ್ಲ.

ಕ್ರಿ. ಶ. ೧೩ನೇ ಶತಮಾನದ ಸುಂಕೇಶ್ವರದ ಎರಡು ಶಾಸನಗಳಲ್ಲಿ ಮಹಾಮಂಡಳೇಶ್ವರ ಮಲ್ಲಿದೇವರಸನ ಉಲ್ಲೇಖವಿದೆ. ಇದೇ ಕಾಲದ ಗುಡಿಹಾಳ ಶಾಸನದಲ್ಲಿ ಮಹಾಸಾಮಂತ ದಾಸಣ್ಣನ ಹೆಸರಿದೆ. ಆದರೆ, ಇವರ ಇತಿವೃತ್ತಗಳು ತಿಳಿಯುವುದಲ್ಲ. ವಿಜಯನಗರದ ಚಕ್ರವರ್ತಿ ಸದಾಶಿವರಾಯನ ಮಾನ್ವಿ ಶಾಸನವು (ಕ್ರಿ.ಶ. ೧೫೫೩) ಮಹಾಮಂಡಳೇಶ್ವರ ಅಳಿಯ ರಾಮರಾಯನನ್ನು ಹೆಸರಿಸಿದೆ.

ಆಡಳಿತಾಧಿಕಾರಿಗಳು:

ಚಕ್ರವರ್ತಿಯು ತನ್ನ ಸಾಮ್ರಾಜ್ಯದ ವಿವಿಧ ಕರ್ತವ್ಯಗಳನ್ನು ನಿರ್ವಹಿಸಲು ಮಂತ್ರಿಗಳನ್ನು ನೇಮಿಸಿಕೊಳ್ಳುತ್ತಿದ್ದನು. ಇದರಂತೆ ವಿವಿಧ ಪ್ರಾಂತಗಳ ಅರಸರೂ ಅನೇಕ

ಅಧಿಕಾರಿಗಳನ್ನು ನೇಮಿಸಿಕೊಳ್ಳುತ್ತಿದ್ದರು. ಇವರಲ್ಲಿ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಶ್ರೇಣಿಯ ಅಧಿಕಾರಿಗಳು ಚಕ್ರವರ್ತಿಯಿಂದ ನಿಯುಕ್ತರಾಗಿದ್ದರೆ, ಇತರರು ಪ್ರಾಂತೀಯ ಅರಸರ ಸಹಾಯಕರಾಗಿದ್ದರು. ಕೇಂದ್ರಸರಕಾರದಲ್ಲಿ ಸುಂಕದ ಇಲಾಖೆ, ವಿದ್ಯಾ ಇಲಾಖೆ, ರಕ್ಷಣ ಇಲಾಖೆ, ವಿದೇಶಾಂಗ ಇಲಾಖೆ ಮೊದಲಾದ ಬೇರೆ ಬೇರೆ ಶಾಖೆಗಳಿದ್ದವು. ಆಯಾ ಇಲಾಖೆಗಳಿಗೆ ಮಹಾಸಾಮಂತಾಧಿಪತಿ ಮಹಾಪ್ರಪಂಡ ದಂಡನಾಯಕರು ಮುಖ್ಯಸ್ಥರಾಗಿದ್ದರು. ಶಾಸನಗಳು ವಿವಿಧ ಇಲಾಖೆಗಳ ಅಧಿಕಾರಿಗಳನ್ನೂ ದಂಡನಾಯಕರೆಂದೇ ಕರೆದಿವೆ. ಆದ್ದರಿಂದ ಇವರು ಕೇವಲ ಸೈನ್ಯಾಧಿಕಾರಿಗಳಾಗಿ ರಲಿಲ್ಲವೆಂಬುದು ಸ್ಪಷ್ಟವಾಗಿದೆ. ಇವರಲ್ಲಿಯ ಮುಖ್ಯಸ್ಥನನ್ನು ಪ್ರಧಾನ, ಮಹಾಪ್ರಧಾನ, ಮಹಾಪ್ರಚಂಡ ದಂಡನಾಯಕ ಎಂಬ ಹೆಸರಿನಿಂದ ಕರೆದಿವೆ. ಇನ್ನು ಈ ಅಧಿಕಾರಿಗಳಿಗೆ ಸಂಬಂಧಿಸಿ ಬರುವ 'ಆಳುತ್ತಮಿರಿ' ಎಂಬುದನ್ನು ತನ್ನ ಹುದ್ದೆಯನ್ನು ನಿರ್ವಹಿಸುತ್ತಿದ್ದನೆಂದೇ ಭಾವಿಸಿಬೇಕು.

ಆಡಳಿತಾಧಿಕಾರಿಗಳು ದೇವಾಲಯ ಇಲ್ಲವೆ ವ್ಯಕ್ತಿಗಳಿಗೆ ದಾನವನ್ನು ಬಿಡುವಾಗ ತಮ್ಮ ಮೇಲಾಧಿಕಾರಿಗಳ ಅನುಮತಿಯನ್ನು ಪಡೆಯಬೇಕಾಗಿದ್ದಿತು. ಕೆಲವೊಮ್ಮೆ ಅವರ ಸಮ್ಮುಖದಲ್ಲಿಯೇ ಈ ಕಾರ್ಯವನ್ನು ನಡೆಸುತ್ತಿದ್ದರು. ಮಾನ್ವಿ ತಾಲೂಕಿನ ಶಾಸನಗಳು ಮೇಲಾಧಿಕಾರಿಗಳ ಸಮ್ಮುಖದಲ್ಲಿಯೇ ಆಡಳಿತಾಧಿಕಾರಿಗಳು ದಾನ ಬಿಟ್ಟುದನ್ನು ಹೇಳಿದೆ.

ಕುರಡಿ ಶಾಸನದಲ್ಲಿ ಆರನೇ ವಿಕ್ರಮಾದಿತ್ಯನ ಅಧಿಕಾರಿ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ರವಿಯಣ ಭಟ್ಟನ ಉಲ್ಲೇಖವಿದೆ. ಮೊದಲನೇ ಸೋಮೇಶ್ವರನ ಅಧಿಕಾರಿ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಪೋತಿಮಯ್ಯನ ಉಲ್ಲೇಖ ಅತನೂರು ಶಾಸನದಲ್ಲಿದೆ. ಆದರೆ ಇವರು ಯಾವ ಖಾತೆಯನ್ನು ನೋಡಿಕೊಳ್ಳುತ್ತಿದ್ದರೆಂಬುದು ಶಾಸನಗಳಿಂದ ತಿಳಿಯುವುದಿಲ್ಲ. ಕಲ್ಲೂರು ಶಾಸನ (ಕ್ರಿ. ಶ. ೧೧೪೩) ದಲ್ಲಿ ಪಟ್ಟ ಸಾಹಣಿ ಹಿರಿಯ ದಂಡನಾಯಕ ಭೀಮಣಯ್ಯನ ಉಲ್ಲೇಖವಿದೆ. ಈತನ ಕೆಳಗೆ ಹೆಗ್ಗಡೆ ದಂಡನಾಯಕ ಕಾವರಾಜಯ್ಯನು ಎಡದೊರೆ-೨೦೦೦ ವನ್ನು ಆಳುತ್ತಿದ್ದನು. 'ಸಾಹಣಿ' ಎಂದರೆ ಪಳಗಿಸುವವನು ಎಂದರ್ಥ. ಆದರೆ 'ಪಟ್ಟಸಾಹಣಿ' ಎಂದರೆ ಏನೆಂದು ಗೊತ್ತಾಗುವುದಿಲ್ಲ. ಬಹುಶಃ ಅವನು ಸೇನಾಧಿಪತಿಯಾಗಿರಬೇಕು. ಅಂದರೆ ಇವರು ರಕ್ಷಣಾ ಇಲಾಖೆಗೆ ಸೇರಿದ ಅಧಿಕಾರಿಗಳಾಗಿದ್ದಾರೆ. ಶ್ರೀಮದಯ್ಯ ಮಹಾಪ್ರಧಾನ ದಂಡನಾಯಕನ ಉಲ್ಲೇಖ ಕುರಡಿ ಶಾಸನ (ಕ್ರಿ. ಶ. ೧೧೪೮) ದಲ್ಲದೆ ಈತನ ಕೆಳಗೆ ಹಿರಿಯಗೊಬ್ಬೂರ ಅಚ್ಚಿನ ಮೊಳೆಯ ಅಸ್ಪಷ್ಟ ಉಲ್ಲೇಖದ ನಾಯಕನಿದ್ದನು. ಆದ್ದರಿಂದ ಇವರು ಭಂಡಾರದ ಅಧಿಕಾರಿಗಳಾಗಿದ್ದಾರೆ.

'ಪಸಾಯಿತ' ಹೆಸರಿನ ಅಧಿಕಾರಿಗಳಿದ್ದುದು ಶಾಸನಗಳಿಂದ ತಿಳಿಯುತ್ತದೆ. ಆದರೆ ಇವರ ಹುದ್ದೆಗಳು ಗೊತ್ತಾಗುವುದಿಲ್ಲ. ಮಾನ್ವಿ ತಾಲೂಕಿನ ಶಾಸನಗಳು 'ಅಧಿಷ್ಠಾಯಕ ಪಸಾಯತ ಅಣ್ಣಲದೇವರಸ (ಬೇವಿನೂರು) ಅಯ್ಯಣವಾಡಿನಾಡ ಹೆಗ್ಗಡೆ- ದಂಡನಾಯಕ-

ಪಸಾಯಿತ ಸುರಗಿ ವೆಣ್ಣಮರಸ (ಕಲ್ಲೂರು-ಕ್ರಿ. ಶ. ೧೦೫೦) ರನ್ನು ಹೆಸರಿಸಿವೆ. ಬಹುಶಃ ಇವರು ಕೇಂದ್ರ ಸರಕಾರ (ಚಕ್ರವರ್ತಿ)ದ ಅಧಿಕಾರಿಗಳಾಗಿರಬೇಕು.

ಆಡಳಿತಾಧಿಕಾರಿಗಳು ತಮ್ಮ ಕಾರ್ಯ ದಕ್ಷತೆ ಮತ್ತು ಪ್ರಾಮಾಣಿಕತೆಯ ಮೂಲಕ ಉನ್ನತ ಹುದ್ದೆಯನ್ನು ಹೊಂದುತ್ತಿದ್ದರು. ಕುರುಡಿ ಶಾಸನಗಳು (ಕ್ರಿ. ಶ. ೧೧೨೩ ಮತ್ತು ಕ್ರಿ. ಶ. ೧೧೩೮) ಮಹಾಪ್ರಧಾನ ದಂಡನಾಯಕ ನಿಂಬಣಯ್ಯನು ತನ್ನ ಸಚ್ಚಾರಿತ್ರ್ಯದಿಂದಲೇ ಮುಂದೆ ಬಂದನೆಂದು ಹೇಳಿವೆ. ಅವನು ಶಸ್ತ್ರ, ಶಾಸ್ತ್ರ, ಸಾಹಿತ್ಯ ಮೊದಲಾದ ಕಲೆಗಳಲ್ಲಿ ಪರಿಣಿತನಾಗಿದ್ದನು.

ಪ್ರಾಂತೀಯ ಅರಸರೂ ತಮ್ಮ ವಿಭಾಗದ ಆಡಳಿತವನ್ನು ನೋಡಿಕೊಳ್ಳಲು ಕೆಲವು ಅಧಿಕಾರಿಗಳನ್ನು ನೇಮಿಸಿಕೊಳ್ಳುತ್ತಿದ್ದರು. ಹೈಹಯ ವಂಶದ ಬೂಚಿದೇವನ ಹೆಗ್ಗಡೆ ಮಲ್ಲದೇವರಸ ಮತ್ತು ಕೊಪ್ಪರಸರು (ಕಲ್ಲೂರು-ಕ್ರಿ. ಶ. ೧೧೫೦) ಹೆಜ್ಜುಂಕ, ಬಿಲ್ಕೊಡೆ ಹಾಗೂ ವಡ್ಡರಾವುಳ ಸುಂಕವನ್ನು ನೋಡಿಕೊಳ್ಳುತ್ತಿದ್ದರು. ಇದೇ ವಂಶದ ಮತ್ತೊಬ್ಬ ಬೂಚಿದೇವನ ಮಹಾಪ್ರಧಾನ ತಂತ್ರಪಾಳ X ಕಣನ ಮತ್ತು ಹೆಗ್ಗಡೆ ಚವುಡಣನ ಉಲ್ಲೇಖ ಕಲ್ಲೂರಿನ ಶಾಸನ (ಕ್ರಿ, ಶ. ೧೦೮೦) ದಲ್ಲಿದೆ. ಹೈಹಯ ವಂಶದ ಅಸ್ಪಷ್ಟ ಉಲ್ಲೇಖದ ಅರಸನ ಅಧಿಕಾರಿಗಳಾದ ಪೆರ್ಗಡೆ ಮಾರಮಯ್ಯ ಮತ್ತು ಪೆರ್ಗಡೆ X X ಳಯ್ಯರ ಉಲ್ಲೇಖ ಸಿರಿವಾರದ ಶಾಸನ (ಕ್ರಿ. ಶ. ೧೦೯೬) ದಲ್ಲಿದೆ.

ಮಾನ್ವಿ ತಾಲೂಕಿನ ಶಾಸನಗಳಲ್ಲಿ ಕಾಣಿಸಿಕೊಳ್ಳುವ ಇತರ ಅಧಿಕಾರಿಗಳೆಂದರೆ ಎರಡನೇ ಜಯಸಿಂಹನ ರಾಣಿ ಮಹಾದೇವಿಯ ತಂತ್ರಪಾಳ ಮಲ್ಲಯ್ಯ (ಬಲ್ಲಟಗಿ ಕ್ರಿ. ಶ. ೧೦೨೨); ದಂಡನಾಯಕ ಚಾಕಿಮಯ್ಯ (ನುಗಡೋಣಿ ಕ್ರಿ. ಶ. ೧೦೩೪); ಹೆಗ್ಗಡೆ ಚವುಡಣ (ಕಲ್ಲೂರ-ಕ್ರಿ. ಶ. ೧೧೩೫); X X Xವತ್ತ ನಾಡ ತಂತ್ರಪಾಳ ಗಂಗರ ಚವುಂಡಯ್ಯ (ಮಾನ್ವಿ - ಕ್ರಿ. ಶ. ೧೧ನೇ ಶತಮಾನ) ಮತ್ತು ಅಸ್ಪಷ್ಟ ಉಲ್ಲೇಖದ ಹೆಜ್ಜುಂಕದಧಿಕಾರಿ (ಗೂಗೇಬಾಳ-ಕ್ರಿ. ಶ. ೧೧೭೫) ಗಳು ಪ್ರಮುಖರಾಗಿದ್ದಾರೆ.

ಅಗ್ರಹಾರ-ಭತ್ತಗ್ರಾಮ:

ಒಂದು ಗ್ರಾಮವನ್ನು ಬ್ರಾಹ್ಮಣರ ಉಪಭೋಗಕ್ಕಾಗಿ ಸರ್ವಭಾದಾಪರಿಹಾರವಾಗಿ ಚಕ್ರವರ್ತಿಗಳು ಬಿಟ್ಟುಕೊಡುತ್ತಿದ್ದರು. ಇಂಥ ಗ್ರಾಮಗಳನ್ನು ಅಗ್ರಹಾರ (ಅಗ್ರ=ಶ್ರೇಷ್ಠ+ ಆಹಾರ= ಸ್ಥಳ) ಗಳೆಂದು ಕರೆಯುತ್ತಿದ್ದರು. ಇವುಗಳ ಮೇಲೆ ಯಾವ ಅರಸರೂ ದಾಳಿಯನ್ನು ಮಾಡುತ್ತಿರಲಿಲ್ಲ. ಬದಲಾಗಿ ಅಲ್ಲಿನ ಬ್ರಾಹ್ಮಣರಿಗೆ, ದೇವಾಲಯಗಳಿಗೆ ದಾನಗಳನ್ನು ಬಿಡುತ್ತಿದ್ದರು. ಅಗ್ರಹಾರದ ಬ್ರಾಹ್ಮಣರನ್ನು ಮಹಾಜನ, ಅಶೇಷ ಮಹಾಜನರೆಂದು ಕರೆಯಲಾಗಿದೆ.

ಮಾನ್ವಿ ತಾಲೂಕಿನ ಕುರುಡಿ, ಕೊಟ್ನೆಕಲ್ಲು, ಕಲ್ಲೂರು, ಕಲ್ಮಲ, ಕಪಗಲ್ಲು, ಬಲ್ಲಟಗಿ, ತಡಕಲ, ಬೇವಿನೂರುಗಳು ಅಗ್ರಹಾರ ಅಥವಾ ಭತ್ತಗ್ರಾಮಗಳಾಗಿದ್ದವೆಂದು ಶಾಸನಗಳು ಹೇಳಿವೆ. ಅಗ್ರಹಾರ ಮತ್ತು ಭತ್ತಗ್ರಾಮಗಳಲ್ಲಿ ಹೆಚ್ಚಿನ ವ್ಯತ್ಯಾಸವಿರಲಿಲ್ಲ.

ಬ್ರಾಹ್ಮಣರು ಸಾಮಾನ್ಯವಾಗಿ ವಿದ್ಯಾವಂತರಾಗಿದ್ದರಿಂದ ಅಗ್ರಹಾರಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ನಡೆಯುತ್ತಿದ್ದವು. ಕೆಲವೊಮ್ಮೆ ಇತರರು ಕಟ್ಟಿಸಿದ ದೇವಾಲಯಕ್ಕೆ ಅವರೂ ದಾನವನ್ನು ಬಿಡುತ್ತಿದ್ದರು. ನಿಂಬಣ ದಂಡನಾಯಕನು ಹಿಂದೆ ಚಂದ್ರಶೇಖರ ಭಟ್ಟರಿಗೆ ಭೂಮಿಯನ್ನು ದಾನವಾಗಿ ನೀಡಿದ್ದು, ನಂತರ ಅದರಲ್ಲಿಯ ಅರ್ಧ ವೃತ್ತಿಯನ್ನು ಕೊಮ್ಮಣಯ್ಯನಿಂದ ಮರಳಿ ಕ್ರಯಕ್ಕೆ ಕೊಂಡು ದಾನವಾಗಿ ಬಿಟ್ಟನೆಂದು ಕುರುಡಿ ಶಾಸನ (ಕ್ರಿ. ಶ. ೧೧೨೩) ಹೇಳಿದೆ. ಕುರುಡಿಯ ಮತ್ತೊಂದು ಶಾಸನವು (ಕ್ರಿ. ಶ. ೧೧೧೯) ಮಧುವಪಯ್ಯ ನಾಯಕನು ಕಟ್ಟಿಸಿದ ವಾಸುದೇವ ದೇವಾಲಯಕ್ಕೆ ಬ್ರಾಹ್ಮಣರೂ ದಾನ ಬಿಟ್ಟರೆಂದು ಹೇಳಿದೆ. ಕಲ್ಲೂರಿನ (ಕ್ರಿ. ಶ. ೧೧೩೫) ಮಾರಟೇಶ್ವರ ದೇವಾಲಯಕ್ಕೆ ದಾನ ಬಿಡುವಾಗ ಅಲ್ಲಿನ ಅಶೇಷ ಮಹಾಜನಗಳು ಉಪಸ್ಥಿತರಿದ್ದರು.

ಆಡಳಿತ ವಿಭಾಗಗಳು:

ಆಡಳಿತ ಅನುಕೂಲಕ್ಕಾಗಿ ಚಕ್ರವರ್ತಿಯು ತನ್ನ ವಿಶಾಲವಾದ ಸಾಮ್ರಾಜ್ಯವನ್ನು ಅನೇಕ ವಿಭಾಗಗಳನ್ನಾಗಿ ವಿಂಗಡಿಸಿದ್ದನು. ಪ್ರಾಚೀನ ಕಾಲದಲ್ಲಿ ಅವುಗಳನ್ನು ಸಂಖ್ಯೆಯ ಮೂಲಕ ಹೆಸರಿಸಲಾಗುತ್ತಿತ್ತು. ಇವು ಆಯಾ ವಿಭಾಗಗಳು ಒಳಗೊಂಡಿದ್ದ ಗ್ರಾಮಗಳ ಸಂಖ್ಯೆಯನ್ನು ಸೂಚಿಸುತ್ತಿದ್ದವು. ಮಾನ್ವಿ ತಾಲೂಕನ್ನೊಳಗೊಂಡು ಇಂದಿನ ರಾಯಚೂರು ಜಿಲ್ಲೆಯು ಪ್ರಾಚೀನ ಎಡೆದೊರೆ-೨೦೦೦ ನಾಡಿನಲ್ಲಿ ಸಮಾವೇಶಗೊಂಡಿತ್ತು. ಡಾ. ಫ್ಲೀಟರು ಇದರ ಗಡಿಯನ್ನು ಕುರಿತು "ಉತ್ತರಕ್ಕೆ ಕೃಷ್ಣಾನದಿ, ದಕ್ಷಿಣಕ್ಕೆ ತುಂಗಭದ್ರ ನದಿಗಳ ನಡುವಿನ ಪ್ರದೇಶ" ಎಂದು ಹೇಳಿದ್ದಾರೆ.[೧೨] ಮುಂದಿನ ವಿದ್ವಾಂಸರು ಈ ಮೇರೆಯನ್ನೇ ಎಡದೊರೆ ಪದದ ನಿಷ್ಪತ್ತಿಯೆಂದು ತಪ್ಪಾಗಿ ಅರ್ಥೈಸುತ್ತ ಬಂದಿದ್ದಾರೆ. ಅಂದರೆ ಎರಡು ನದಿಗಳ ನಡುವಿನ ಪ್ರದೇಶದವೇ ಎಡದೊರೆನಾಡು ಎಂದು ಸರಳೀಕರಿಸಿದ್ದಾರೆ.

ಬನವಾಸಿನಾಡಿನಲ್ಲಿ ಎಡದೊರೆ-೭೦ ಮತ್ತು ಗಂಗವಾಡಿ ನಾಡಿನಲ್ಲಿ ಎಡತ್ತೊರೆ-೧೦೦೦ ವೆಂಬ ವಿಭಾಗಗಳಿವೆ. ಮೈಸೂರು ಜಿಲ್ಲೆಯ ಎಡದೊರೆ ಹೆಸರಿನ ಗ್ರಾಮವೇ ಗಂಗವಾಡಿನಾಡಿನ ಎಡೆತೊರೆ-೧೦೦೦ ವಿಭಾಗದ ಮುಖ್ಯ ಪಟ್ಟಣವಾಗಿದೆ.[೧೩] ಕೊಪ್ಪಳ ಜಿಲ್ಲೆಯಲ್ಲಿ 'ಎಡೆಯಹಳ್ಳಿ' ಹೆಸರಿನ ಗ್ರಾಮವಿದೆ'[೧೪] ಈ ಎಲ್ಲ ಗ್ರಾಮಗಳು ಯಾವುದೊ ನದಿಯ ಪಕ್ಕದಲ್ಲಿ ಬೆಳೆದು ನಿಂತಿವೆ. ಆದ್ದರಿಂದ ಅವುಗಳನ್ನು ತೊರೆಯ ಸಮೀಪದ ಗ್ರಾಮಗಳು ಎಂಬ ಅರ್ಥದಲ್ಲಿ 'ಎಡದೊರೆ' ಎಂದು ಕರೆಯಲಾಗಿದೆ. ರಾಯಚೂರು ಜಿಲ್ಲೆಯ ಶಾಸನಗಳಲ್ಲಿ ಕಾಣಿಸಿಕೊಳ್ಳುವ ಎಡೆದೊರೆಯೂ ಅದೇ ಹೆಸರಿನ ಗ್ರಾಮವಾಗಿದೆ. ಮುಂದೆ ೧೧ನೇ ಶತಮಾನದಿಂದ ಈ ಎಡೆದೊರೆ ೨೦೦೦ನಾಡಿನ

---

12. E.I.12 No.32 P. 296 333

13. ನಮ್ಮ ಜಿಲ್ಲೆ ಒಂದು ಐತಿಹಾಸಿಕ ಪರಿಚಯ ಡಾ. ಚನ್ನಬಸವ ಹಿರೇಮಠ ಮಸ್ಕಿ, ೧೯೯೬, ಪು. ೯-೧೯ ಮತ್ತು ಸುದ್ದಿ ಮೂಲ ಪತ್ರಿಕೆ ದಿನಾಂಕ ೫-೪-೯೮ರ 'ಎಡೆದೊರೆ ಪದದ ನಿಷ್ಪತ್ತಿ' ಲೇಖನ ಡಾ. ಚನ್ನಬಸವ ಹಿರೇಮಠ

14. ಶಾಸನ ಪರಿಚಯ (ಸಂ) ಡಾ. ಪಿ. ಬಿ. ದೇಸಾಯಿ, ಶಾಸನ 49, ಪು. 65-66

ರಾಜಧಾನಿಯು ಇಂದಿನ ಲಿಂಗಸೂಗೂರು ತಾಲೂಕಿನ ಮಸ್ಕಿಗೆ ಸ್ಥಳಾಂತರವಾಯಿತು.[೧೫].

ಮಾನ್ವಿ ತಾಲೂಕಿನ ಶಾಸನಗಳು ಅಯ್ಯಣವಾಡಿ-೩೦೦, ಮೊಸಳೆಕಲ್ಲು-೩೦೦, ಗೋರಿಕಲ್ಲು-೧೨, ಮುದುಗುಂದೂರು-೩೦೦, ನಿಟ್ಟರವೆ-೭೦ ವಿಭಾಗಗಳನ್ನು ಉಲ್ಲೇಖಿಸಿವೆ.

ಅಯ್ಯಣವಾಡಿ-೩೦೦: ಕುರುಡಿ ಶಾಸನವು (ಕ್ರಿ.ಶ. ೧೦೭೯) "ನೆಗಳ್ದಯ್ಯಣ ವಾಡಿ ನಾಳ್ಕಳಂ ಕ್ರಿತಿಯೆನೆಸೆದ ರೂಡಿ" ಎಂದು ಹೇಳಿದೆ. ಇಂದಿನ ದೇವದುರ್ಗ ತಾಲೂಕಿನ ಗೊಬ್ಬೂರು ಅಯ್ಯಣವಾಡಿ ನಾಡಿನ ಅಗ್ರಹಾರವಾಗಿತ್ತೆಂದು ಅಲ್ಲಿಯ ಶಾಸನ ಹೇಳಿದೆ[೧೬]. ಅಂದರೆ ಇಂದಿನ ಮಾನ್ವಿ ರಾಯಚೂರು ಮತ್ತು ದೇವದುರ್ಗ ತಾಲೂಕಿನ ಅನೇಕ ಹಳ್ಳಿಗಳು ಈ ವಿಭಾಗದಲ್ಲಿ ಸಮಾವೇಶಗೊಂಡಿದ್ದವೆಂದು ಹೇಳಬಹುದು. ಆದರೆ ಈ ಅಯ್ಯಣ ವಾಡಿಯ ಮುಖ್ಯಪಟ್ಟಣವನ್ನು ಗುರುತಿಸಲು ಸಾಧ್ಯವಾಗಿಲ್ಲ.

ಮೊಸಳೆಕಲ್ಲು-೩೦೦: ಇಂದಿನ ದೇವದುರ್ಗ ತಾಲ್ಲೂಕಿನ ಮೊಸರಕಲ್ಲು ಗ್ರಾಮವೇ ಪ್ರಾಚೀನ ಮೊಸಳೆಕಲ್ಲು-೩೦೦ರ ಮುಖ್ಯಪಟ್ಟಣವಾಗಿದೆ. ನುಗಡೋಣಿ ಶಾಸನವು (ಕ್ರಿ.ಶ. ೧೦೩೪) 'ಎಡೆದೊರೆ-೨೦೦೦ ದೊಳಗಣ ಮೊಸಳಿಕಲ್ಲು-೩೦೦ ರ ಬಳಿಯ ಭತ್ತಗ್ರಾಮ ಬಳ್ಳನಿಟ್ಟಿಗೆ' ಎಂದು ಹೇಳಿದೆ. ಬಲ್ಲಟಗಿಯ ಶಾಸನಗಳಲ್ಲೂ (ಕ್ರಿ. ಶ. ೧೦೩೬ ಮತ್ತು ಕ್ರಿ.ಶ. ೧೦೫೮) ಈ ವಿಭಾಗದ ಉಲ್ಲೇಖವಿದೆ.

ಗೋರಿಕಲ್ಲು ೧೨: ಇದು ಮೊಸಳೆಕಲ್ಲು-೩೦೦ರ ಉಪವಿಭಾಗ. ಕಪಗಲ್ಲು ಶಾಸನವು (ಕ್ರಿ. ಶ. ೧೦೬೯) ಮೊಸಳಿಕಲ್ಲು-೩೦೦ರ ಬಳಿಯ ಕಂಪಣ ಗೋರಿಕಲ್ಲು-೧೨ ರಲ್ಲಿಯ ಭತ್ತಗ್ರಾಮ ಕಪಗಲ್ಲು ಎಂದು ಹೇಳಿದೆ. ಇಂದಿನ ಮಾನ್ವಿ ತಾಲೂಕಿನ ಗೋರ್ಕಲ್ಲು ಗ್ರಾಮವೇ ಪ್ರಾಚೀನ ಗೋರಿಕಲ್ಲು-೧೨ರ ಮುಖ್ಯ ಪಟ್ಟಣವಾಗಿದೆ.

ಒಟ್ಟಿನಲ್ಲಿ ದೇವದುರ್ಗ ತಾಲ್ಲೂಕಿನ ಮೊಸರಕಲ್ಲು ಗ್ರಾಮವನ್ನೊಳಗೊಂಡು, ಮಾನ್ವಿ ತಾಲ್ಲೂಕಿನ ಬಲ್ಲಟಗಿ, ಗೋರ್ಕಲ್ಲು ಮತ್ತು ಕಪಗಲ್ಲುಗಳು ಈ ವಿಭಾಗದಲ್ಲಿ ಸಮಾವೇಶಗೊಂಡಿದ್ದವೆಂದು ಹೇಳಬೇಕಾಗುತ್ತದೆ.

ಮುದುಗುಂದೂರು-೩೦೦: ಕಲ್ಲೂರು ಶಾಸನ (ಕ್ರಿ. ಶ. ೧೧೩೫) ದಲ್ಲಿ ಈ ವಿಭಾಗದ ಉಲ್ಲೇಖವಿದೆ. ಅದನ್ನು ಹೈಹಯ ವಂಶದ ಅರಸರು ಆಳುತ್ತಿದ್ದರು. ಚಾಲುಕ್ಯ ಒಂದನೇ ಸೋಮೇಶ್ವರನ ಕಾಲದ ಅತನೂರು ಶಾಸನವು ಮಹಾಪ್ರಚಂಡ ದಂಡನಾಯಕ ಪೋತಿಮಯ್ಯನು ದಾನ ಬಿಡುವಾಗ ಹೈಹಯ ವಂಶದ ಅಂಗ್ಯಪರಸ ಮತ್ತು ಮುದುಗುದೂರು ಪಲ್ಲೇಶ್ವರ ದೇವಾಲಯದ ಸ್ಥಾನಪತಿಗಳೂ ಉಪಸ್ಥಿತರಿದ್ದರೆಂದು ಹೇಳಿದೆ. ಗೊಬ್ಬೂರು ಶಾಸನ (ಕ್ರಿ. ಶ. ೧೦೮೫) ದಲ್ಲಿ "x x ಗುಂಡೂರು ಮುಂನೂರರ ಬಳಿಯ ಹಳ್ಳಿಸಿಂಕೆ"ಯ ಉಲ್ಲೇಖವಿದೆ.[೧೭] ಇಲ್ಲಿಯ ತ್ರುಟಿತ ಭಾಗವನ್ನು "ಮುದುಗುಂದೂರು"

15. ನೋಡಿ. ಕಾಯಕ ಸಿರಿ (ಸ್ಮರಣಸಂಚಿಕೆ), ಗಂಗಾವತಿ, 1996, ಪು. 29
16. ಪೂರ್ವೋಕ್ತ, ಡಾ. ವಿ. ಶಿವಾನಂದ, ಪು. 203

ಎಂದು ಕಟ್ಟಿಕೊಡಬಹುದು. ಜೋಯಿಮರಸನು ಈ ವಿಭಾಗವನ್ನೊಳಗೊಂಡು ಎಡೆದೊರೆ ನಾಡನ್ನು ಆಳುತ್ತಿದ್ದನೆಂದು ಮೇಲಿನ ಗೊಬ್ಬೂರು ಶಾಸನ ಹೇಳಿದೆ.

ನಿಟ್ಟರವೆ-೭೦: ಕುರುಡಿ ಶಾಸನ (೧೧೧೯) ಉಲ್ಲೇಖಿಸುವ ಈ ವಿಭಾಗವು ಎಡೆದೊರೆ ನಾಡಿನ ಕೆಳವಾಡಿ-೩೦೦ ರ ಉಪವಿಭಾಗವಾಗಿರಬೇಕು. ಸಿಂಧನೂರು ತಾಲ್ಲೂಕಿನ ಮುಕ್ಕುಂದ ಗ್ರಾಮವು ಇದರಲ್ಲಿನ ಒಂದು ಅಗ್ರಹಾರವಾಗಿದೆ.

ಕರಡಿಕಲ್ಲು-೩೦೦:- ಇದು ಎಡೆದೊರೆ ನಾಡಿನ ಉಪವಿಭಾಗವಾಗಿದೆ. ಇಂದಿನ ಲಿಂಗಸೂಗೂರು ತಾಲ್ಲೂಕಿನ ಕರಡಿಕಲ್ಲು ಗ್ರಾಮವೇ ಈ ವಿಭಾಗದ ಮುಖ್ಯ ಪಟ್ಟಣವಾಗಿದೆ. ಕುರುಡಿ ಶಾಸನವು (ಕ್ರಿ. ಶ. ೧೧೧೯) 'ಕರಡಿಕಲ್ಮೂನೂರರಲ್ಲಿಯ ಬನ್ನಿಗೊಳ' ಎಂದು ಹೇಳಿದೆ. ಈ ಬನ್ನಿಗೋಳವು ಕರಡಿಕಲ್ಲು ನಾಡಿನ ಒಂದು ಭತ್ತಗ್ರಾಮವಾಗಿತ್ತು.

ಇದಲ್ಲದೆ ಬೇವಿನೂರು ಶಾಸನವು (ಕ್ರಿ. ಶ. ೧೨ ನೇ ಶತಮಾನ) " XXXX Xರ ಬಳಿಯ ಭತ್ತಗ್ರಾಮ ಬೇವಿನಹಾಳ" ಎಂದು ಹೇಳಿದೆ. ಶಾಸನವು ತ್ರುಟಿತವಾಗಿರವುದರಿಂದ ಈ ಬೇವಿನಾಳ ಗ್ರಾಮವು ಯಾವ ವಿಭಾಗದಲ್ಲಿತ್ತೆಂಬುದು ತಿಳಿಯುವುದಿಲ್ಲ.

ವರ್ತಕರು ಮತ್ತು ಸಂಘಗಳು:

ವ್ಯಾಪಾರವನ್ನೇ ವೃತ್ತಿಯಾಗಿಸಿಕೊಂಡವರು ವರ್ತಕರು. ಇವರಲ್ಲಿಯೂ ಅನೇಕ ಪಂಗಡಗಳಿದ್ದವು. ಅವರಲ್ಲಿ ಬಣಂಜಿಗ, ಸೆಟ್ಟಿ, ಸೆಟ್ಟಗುತ್ತ, ನಖರ, ಮುಮ್ಮುರಿದಂಡ ಮತ್ತು ನಾನಾದೇಶಿಗಳು ಸೇರಿದ್ದಾರೆ. ಮಾನ್ವಿ ತಾಲ್ಲೂಕಿನ ಶಾಸನಗಳಲ್ಲಿ ಈ ವ್ಯಾಪಾರಿಗಳ ಉಲ್ಲೇಖವಿದ್ದು, ಅವರು ಇಲ್ಲಿಯ ಅನೇಕ ದೇವಾಲಯಗಳಿಗೆ ದಾನವನ್ನು ಬಿಟ್ಟಿದ್ದಾರೆ. ಈ ವ್ಯಾಪಾರಿ ವರ್ಗದ ಸಮಾನ ವೃತ್ತಿಯವರು ಒಟ್ಟಾಗಿ ಒಂದೊಂದು ಸಂಘಗಳನ್ನು ಕಟ್ಟಿಕೊಂಡಿದ್ದರು.

'ಶ್ರೀವುರದಿನ್ನೊರ್ಬ್ಬರ' ಉಲ್ಲೇಖ ಸಿರಿವಾರ ಶಾಸನ (ಕ್ರಿ. ಶ. ೧೦ನೇ ಶತಮಾನ) ದಲ್ಲಿದೆ. ಕಲ್ಲೂರು ಶಾಸನವು (ಕ್ರಿ. ಶ. ೧೦೮೦) ಎಲೆಯನ್ನು ಮಾರುವ ವ್ಯಾಪಾರಿಗಳು ಕಟ್ಟಿಕೊಂಡ 'ಹನ್ನವಣ ಸಾಸಿಬ್ಬರ' ಸಂಘವನ್ನು ಹೇಳಿದೆ. ಮಹಾನಾಡುಗಳು ಮತ್ತು ನಾನಾದೇಶಗಳು ಸಮಸ್ತ ವ್ಯಾಪಾರವನ್ನು ಮಾಡುತ್ತಿದ್ದರು. ಇವರ ವ್ಯಾಪಾರದಲ್ಲಿ ಮುಖ್ಯವಾಗಿ ಮೆಣಸು, ಸುಂಠಿ, ಹಿಪ್ಪಲಿ, ಸಕ್ಕರೆ, ಬೆಲ್ಲ, ಅರಿಸಿನ, ಸಾಸಿವೆ, ಜೀರಿಗೆ ಮೊದಲಾದ ದಿನಸಿಗಳು ಸೇರಿದ್ದವೆಂದು ಕುರಡಿ ಶಾಸನ (ಕ್ರಿ. ಶ. ೧೧೪೮) ಹೇಳಿದೆ. ಇವರಲ್ಲಿ ಮಹಾನಾಡುಗಳ ೫೦೦ ಜನರ ಸಂಘವನ್ನು ಕಲ್ಲೂರು ಶಾಸನ (ಕ್ರಿ. ಶ. ೧೦೮೦) ಉಲ್ಲೇಖಿಸಿದೆ. ಗೂಗೇಬಾಳ ಶಾಸನವು (ಕ್ರಿ. ಶ. ೧೧೭೫) ನಾನಾದೇಶಿ, ಸೆಟ್ಟಿಗುತ್ತ, ಮುಮ್ಮುರಿದಂಡ, ನಖರ ಮತ್ತು ಅರುವತ್ತೊಕ್ಕಲುಗಳನ್ನು ಹೆಸರಿಸಿದೆ.

---

17. ಅದೇ, ಪು. 33

ದಾನ-ಧರ್ಮ:

ಪ್ರಾಚೀನ ಕಾಲದಲ್ಲಿ ದಾನ-ಧರ್ಮಗಳನ್ನು ಗ್ರಹಣ-ಸಂಕ್ರಮಣಾದಿ ಪವಿತ್ರ ದಿನಗಳಲ್ಲಿ ಮಾಡುತ್ತಿದ್ದರು. ಈ ಸಮಯಗಳಲ್ಲಿ ನದಿ ಸ್ನಾನ ಮಾಡುವುದು ಒಂದು ಸಂಪ್ರದಾಯ. ಎರಡು ನದಿಗಳು ಸೇರುವ ಸ್ಥಳ (ಕೂಡಲ) ಪವಿತ್ರವೆಂದು ಪ್ರಾಚೀನರು ತಿಳಿದಿದ್ದರು. ಚಾಲುಕ್ಯ ಒಂದನೇ ಸೋಮೇಶ್ವರ ರಾಣಿ ಚಾಮಲದೇವಿಯು ತುಂಗಭದ್ರ ಮತ್ತು ಕೃಷ್ಣ ನದಿಗಳ ಸಂಗಮದಲ್ಲಿ ಸ್ನಾನ ಮಾಡಿದಳೆಂದು ಬಲ್ಲಟಗಿ ಶಾಸನ (ಕ್ರಿ. ಶ. ೧೦೫೮) ಹೇಳಿದೆ. ಈ ಸಮಯದಲ್ಲಿ ಅಲ್ಲಿಯ ಕೆರೆಗೆ ಭಾಸ್ಕರಸೆಟ್ಟಿಯ ಮೂಲಕ ದಾನ ಬಿಡುತ್ತಾಳೆ. ವಿಜಯನಗರದ ಕೃಷ್ಣದೇವರಾಯನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲದೇವಿಯರು ಕೃಷ್ಣಾ-ಭೀಮಾನದಿಗಳ ಸಂಗಮ (ಈಗಿನ ರಾಯಚೂರು ಸಮೀಪದ ಕೂಡಲೂರು)ದಲ್ಲಿ ಸ್ನಾನಮಾಡಿ ದತ್ತಿ ಬಿಟ್ಟರೆಂದು ಚೀಕಲಪರ್ವಿ ಶಾಸನ (ಕ್ರಿ. ಶ. ೧೫೨೧) ಹೇಳಿದೆ.

ದೇವಾಲಯಗಳನ್ನು ನಿರ್ಮಿಸುವುದು, ಕೆರೆ-ಬಾವಿಗಳನ್ನು ತೋಡಿಸುವುದು, ಸತ್ರಗಳನ್ನು ನಿರ್ಮಿಸುವು ಆ ಕಾಲದ ಜನರ ಆದರ್ಶವಾಗಿದ್ದವು. ಇದರಿಂದಾಗಿ ಅನೇಕ ದೇವಾಲಯ, ಕೆರೆ-ಬಾವಿಗಳು ನಿರ್ಮಾಣಗೊಂಡವು. ಬಲ್ಲಟಗಿಯಲ್ಲಿ ಪಾಪೇಶ್ವರ, ತ್ರೈಪುರುಷ, ಚಂದೇಶ್ವರ, ಕಲಿದೇವ, ಕೇಲೇಶ್ವರ, ಆದಿತ್ಯ ಮತ್ತು ಒಂದು ಬಸದಿ ನಿರ್ಮಾಣವಾದವು. ಕುರುಡಿಯಲ್ಲಿ ವಾಸುದೇವ, ಪಲ್ಲವೇಶ್ವರ, ನಿಂಬಣೇಶ್ವರ, ರೆಬ್ಬಲೇಶ್ವರ, ಶಂಕರೇಶ್ವರ ಮತ್ತು ನಾಗೇಶ್ವರ ದೇವಾಲಯಗಳು; ಸ್ಥಾಪಿತವಾದವು. ಇವುಗಳಲ್ಲದೆ ನುಗಡೋಣಿಯಲ್ಲಿ ಮಹಾದೇವ; ನಖರೇಶ್ವರ ದೇವಾಲಯಗಳು ಕಪಗಲ್ಲದಲ್ಲಿ ಭೋಗೇಶ್ವರ, ತುಪದೂರಲ್ಲಿ ಮಾಣಿಕೇಶ್ವರ; ಗುಡಿಹಾಳದಲ್ಲಿ ಮಹಾದೇವ, ರಾಜೊಳ್ಳಿಯಲ್ಲಿ ಗರ್ಗೇಶ್ವರ, ಹರವಿಯ ಸ್ವಯಂಭು ಮೂಲಸ್ಥಾನ; ಕಲ್ಲೂರಿನ ಮಾರಟೇಶ್ವರ, ಗವರೇಶ್ವರ ಮತ್ತು ಕೇಶವ ದೇವಾಲಯಗಳನ್ನು ಹೆಸರಿಸಬಹುದು. ಅಲ್ಲದೆ ದದ್ದಲದಲ್ಲಿ ಗಿರಿಕೋಟೆಮಲ್ಲ ಜಿನಾಲಯ ಸ್ಥಾಪನೆಗೊಂಡಿತು.

ಬಲ್ಲಬಟಗಿ, ಕುರುಡಿ ಮತ್ತು ಕಲ್ಲೂರುಗಳಲ್ಲಿ ಕೆರೆಗಳು ನಿರ್ಮಾಣಗೊಂಡುದನ್ನು ಅಲ್ಲಿಯ ಶಾಸನಗಳು ತಿಳಿಸುತ್ತವೆ. ಕಪಗಲ್ಲು, ಕುರಕುಂದ ಮತ್ತು ಹಿರೇಕೊಟ್ನೆಕಲ್ಲು ಗ್ರಾಮದಲ್ಲಿ ಸತ್ರಗಳು ನಿರ್ಮಾಣವಾದವು.

ದೇವಾಲಯಗಳಿಗೆ ದಾನ ಬಿಡುವಾಗ ಅಲ್ಲಿ ವಿದ್ಯಾಭ್ಯಾಸ ನಡೆಯುವುದಕ್ಕೂ ನೀಡುತ್ತಿದ್ದರು. ಅಗ್ರಹಾರದ ಬ್ರಾಹ್ಮಣರಿಗೆ, ಇತರ ಊರುಗಳಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರಿಗೆ ಮತ್ತು ದೇವಾಲಯಗಳ ಸ್ಥಾನಾಚಾರ್ಯರಿಗೆ ನೀಡುವ ದಾನಗಳಲ್ಲಿ ಈ ಉದ್ದೇಶವೂ ಅಡಗಿದಂತಿದೆ. ಕಲ್ಲೂರು ಶಾಸನದ (ಕ್ರಿ. ಶ. ೧೦೯೭) ಸೋಮಯಾಜಿ ಭಟ್ಟೋಪಾಧ್ಯಾಯ, ಕುರುಡಿ ಶಾಸನದ (ಕ್ರಿ. ಶ. ೧೧೩೫) ಸೋಮಭಟ್ಟೋಪಾಧ್ಯಾಯ ಮತ್ತು ಅವರ ಮಗ xxಯಣ ಭಟ್ಟೋಪಾಧ್ಯಾಯ ಮೊದಲಾದವರು ವಿದ್ಯಾರ್ಥಿಗಳಿಗೆ

ಶಿಕ್ಷಣವನ್ನು ನೀಡುತ್ತಿದ್ದರು. ಇವರಲ್ಲಿ ಕಲ್ಲೂರಿನ ಸೋಮಯಾಜಿಯು ಆರನೇ ವಿಕ್ರಮಾದಿತ್ಯನ ವಿದ್ಯಾಗುರುಗಳಾಗಿದ್ದರು. ದೇವಾಲಯಗಳಿಗೆ ಮತ್ತು ವಿದ್ಯಾಭ್ಯಾಸಕ್ಕೆ ರಾಜರು ಮತ್ತು ಪ್ರಜೆಗಳೆಂಬ ಭೇದವಿಲ್ಲದೆ ಎಲ್ಲರೂ ದಾನ ಮಾಡುತ್ತಿದ್ದರು. ಸ್ಥಳೀಯವಾಗಿ ನಡೆಯುವ ಈ ಕಾರ್ಯದಲ್ಲಿ ಆಯಾ ಊರುಗಳ ಗಾವುಂಡರು, ಪ್ರಭುಗಾವುಂಡರು ಹಾಜರಿರುತ್ತಿದ್ದರು. ಮಾನ್ವಿ ತಾಲೂಕಿನ ಬಲ್ಲಟಗಿ, ಬಾಗಲವಾಡ, ಸುಂಕೇಶ್ವರ, ಮಾನ್ವಿ ಮತ್ತು ಕಲ್ಲೂರು ಶಾಸನಗಳಲ್ಲಿ ಇಂಥ ಸ್ಥಳೀಯ ಮುಖಂಡರ ಉಲ್ಲೇಖವಿದೆ. ಅದರಲ್ಲೂ ಕಲ್ಲೂರು ಶಾಸನವು (ಕ್ರಿ. ಶ. ೧೬೫೦) 'ಗೌಡ ಕುಲಕರ್ಣಿ ಸೆಟ್ಟಿ ಸೌದ್ರಿ ಮುಂತಾದ ಸಮಸ್ತ ಪ್ರಜೆಗಳ ಧರ್ಮಸಾಕ್ಷಿಯಾಗಿ' ದಾನ ಬಿಟ್ಟರೆಂದು ಹೇಳಿದೆ.

ನಾಣ್ಯ-ಅಳತೆ-ತೆರಿಗೆ:

ಮಾನ್ವಿ ತಾಲ್ಲೂಕಿನ ಶಾಸನಗಳು ವೀಸ, ಹಾಗ, ಬೇಳೆ, ಅರೆಕಾಣೆ, ಗದ್ಯಾಣ, ಮುಪ್ಪಾಗ, ಪೊನ್ನು ಮೊದಲಾದ ನಾಣ್ಯಗಳು ಈ ವಿಭಾಗದಲ್ಲಿ ಚಲಾವಣೆಯಲ್ಲಿದ್ದುದನ್ನು ಹೇಳಿವೆ. ಕೈ, ಕಂಬ ಮತ್ತು ವೊಕುಳಗಳು ಇಲ್ಲಿಯ ಅಳತೆಯ ಮಾಪನಗಳಾಗಿದ್ದವು. ಸಿದ್ಧಾಯ, ಬಿರಾಡ, ಹೆಜ್ಜುಂಕ, ಬಿಲ್ಕೊಡೆ, ವಡ್ಡರಾವುಳ, ಮನ್ನೆಯ ಸಾಮ್ಯದ ತೆರೆ, ದಸವಂದ ಮೊದಲಾದ ತೆರಿಗೆಗಳನ್ನು ಇಲ್ಲಿಯ ಶಾಸನಗಳು ಉಲ್ಲೇಖಿಸಿವೆ.

ಸ್ಥಳನಾಮಗಳು:

ಮಾನ್ವಿ ತಾಲ್ಲೂಕಿನ ಶಾಸನಗಳು ಉಲ್ಲೇಖಿಸುವ ಸ್ಥಳನಾಮಗಳಲ್ಲಿ ಕೆಲವನ್ನು ಹೊರತುಪಡಿಸಿ ಉಳಿದೆಲ್ಲವೂ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಇಂದಿಗೂ ಉಳಿದು ಬಂದಿವೆ. ಅವುಗಳೆಂದರೆ:

ಬಳ್ಳನಿಟ್ಟಿಗೆ (ಕ್ರಿ. ಶ. ೧೦೨೨) > ಬಳ್ಳನಿಟ್ಟಗೆ (ಕ್ರಿ. ಶ. ೧೦೩೧) > ಬೆಳ್ಳನಿಟ್ಟಗೆ (ಕ್ರಿ. ಶ. ೧೦೫೮) > ಬಲ್ಲಟಗಿ.

ದಿಗ್ಗಿಗೆ (ಕ್ರಿ. ಶ. ೧೦೩೧ ಬಲ್ಲಟಗಿ) > ದಿದ್ದಿಗಿ (ಸಿಂಧನೂರು ತಾಲ್ಲೂಕು)
ತಡಕಲ (ಕ್ರಿ. ಶ. ೧೦೩೩) > ತಡಕಲ್ಲು
ಬಾಗುಟಿಪಟಿಲ (ಕ್ರಿ.ಶ. ೧೦೫೩) > ಬಾಗುಳಹಾಟಿ > ಬಾಗಲವಾಡ
ಕವತಾಳ (ಕ್ರಿ. ಶ. ೧೦೫೮) > ಕೌತಾಳ
ಮಾನುವೆ (ಕ್ರಿ. ಶ. ೧೦೬೯ ಕುಪಗಲ್ಲು) > ಮಾನ್ವಿ
ಗೋರಿಕಲ್ಲು (ಕ್ರಿ. ಶ. ೧೦೬೯ ಕಪಗಲ್ಲು) > ಗೋರಕಲ್ಲ (ಕ್ರಿ. ಶ. ೧೬೧೬) > ಗೋರ್ಕಲ್ಲು
ಕಪ್ಪಕಲ್ಲ (ಕ್ರಿ. ಶ. ೧೦೬೯) > ಕಪಗಲ್ಲು
ರೂಡಿ (ಕ್ರಿ. ಶ. ೧೦೭೯) > ಕುರುಡಿ
ಟಿಾ ಟಿಾ ವಿ (ಕ್ರಿ. ಶ. ೧೧೩೮ ಕುರುಡಿ) > ರಾ ರಾ ವಿ
ಬೇವಿನಹಾಳ (ಕ್ರಿ. ಶ. ೧೦೭೬ ಕುರುಡಿ) > ಬೇವಿನೂರು
ಕಲ್ಲೂರ (ಕ್ರಿ.ಶ. ೧೦೮೦) > ಕಲ್ಲೂರು

ಗೊಬ್ಬೂರು (ಕ್ರಿ. ಶ. ೧೦೯೭ ಕಲ್ಲೂರು) > ಹಿರಿಯ ಗೊಬ್ಬೂರು (ಕ್ರಿ.ಶ. ೧೧೪೮ ಕುರಡಿ) >ಗೊಬ್ಬೂರು (ದೇವದುರ್ಗ ತಾಲ್ಲೂಕು)

ಮುಕುಂದ (ಕ್ರಿ.ಶ. ೧೧೧೯ಕುರಡಿ) > ಮುಕ್ಕುಂದಿ (ಸಿಂಧನೂರು ತಾಲ್ಲೂಕು)

ಬನ್ನಿಗೊಳ (ಕ್ರಿ.ಶ. ೧೧೧೯ ಕುರಡಿ)>ಬನ್ನಿಗೋಳ (ಲಿಂಗಸೂಗೂರು ತಾಲ್ಲೂಕು)

ತುಪ್ಪದುರ > ತುಪದೂರು
ಮಲ್ಲಿಗೆ ಮಡುವ >ಮಲ್ಲಿಗೆ ಮಡುವು
ಮಱುಚೇಡ > ಮರ್ಚೇಡ
ವಡವಟಿ > ವಡವಾಟಿ
ಸರಜಾಪುರ >ಸರ್ಜಾಪುರ (ಲಿಂಗಸೂಗೂರು ತಾಲೂಕು)
ಸಿರವಾರ (ಕ್ರಿ. ಶ. ೧೬೯೩) >ಶ್ರೀವುರ>ಸಿರಿವಾರ

ಇವುಗಳಲ್ಲದೆ ಮಲೆಯ, ಹಣ್ಬುಗ, ತರ್ವಳ್ವುಚ, ಬಮ್ಮಱಹಾಳ, ಹಾಗನಗೇರಿ, ನಿಟ್ಟರವೆ, ಕಾಕಱಗಲಿ ಮೊಸಳಿಕಲ್ಲ ಮತ್ತು ಕರಡಿಕಲ್ಲು ಸ್ಥಳನಾಮಗಳ ಉಲ್ಲೇಖಗಳಿವೆ. ಇವುಗಳಲ್ಲಿ ಮೊಸಳಿಕಲ್ಲು, ಕಾಕರಕಲ್ಲು ಮತ್ತು ಕರಡಿಕಲ್ಲುಗಳನ್ನು ಮಾತ್ರ ಗುರುತಿಸಲು ಸಾಧ್ಯವಿದೆ.

ಒಟ್ಟಿನಲ್ಲಿ ಮಾನ್ವಿ ತಾಲ್ಲೂಕಿನ ಶಾಸನಗಳು ಈ ಭಾಗದ ಚರಿತ್ರೆಯ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತವೆ. ಅನೇಕ ಹೊಸ ಮಾಹಿತಿಗಳು ಪ್ರಥಮಬಾರಿಗೆ ಈ ಶಾಸನಗಳ ಮೂಲಕ ಚರಿತ್ರೆಯ ಪುಟಗಳಲ್ಲಿ ದಾಖಲಾಗುತ್ತಿವೆ. ಪ್ರಾಚೀನ ಕರ್ನಾಟಕದ ಸಂಸ್ಕೃತಿಯನ್ನು ಪುನಾರಚಿಸುವಲ್ಲಿ ಇವು ಆಕರಗಳಾಗಿವೆ. ಈ ಭಾಗದ ಜನಜೀವನ, ಉದ್ಯೋಗ-ವ್ಯಾಪಾರ, ದಾನ-ಧರ್ಮಗಳ ಜೊತೆಗೆ ಸ್ಥಳೀಯ ಕಾನೂನುಗಳ ಪರಿಚಯವಾಗುತ್ತದೆ. 'ಭಂಭರರು' ಹೆಸರಿನ ಜನಾಂಗ ಇಲ್ಲಿ ೧೦ ನೇ ಶತಮಾನದಲ್ಲಿ ನೆಲಸಿದ್ದ ಸಂಗತಿ ಅಪರೂಪವಾಗಿದೆ. ಇದಲ್ಲದೆ ನಾಯಿಂದರು, ಗೊರವರು, ಸೂತ್ರದಾರರು (ಕಲ್ಲುಕುಟಿಗರು) ಮತ್ತು ಟಂಕಸಾಲೆಯಲ್ಲಿ ಕೆಲಸ ಮಾಡುತ್ತಿದ್ದ ಸಾಮಾನ್ಯ ಜನರೂ ಇಲ್ಲಿಯ ಶಾಸನಗಳಲ್ಲಿ ಕಾಣಿಸಿಕೊಂಡಿದ್ದಾರೆ. ಅವರೆಲ್ಲರ ಬದುಕಿನ ಸ್ಥೂಲ ವಿವರಗಳು ಇದೀಗ ನಮ್ಮ ಕಣ್ಮುಂದೆ ಇವೆ.

□

೧

ಕುರುಡಿ–ಕ್ರಿ.ಶ. ೮೬೨

(ಬಿ.ನಂ. ೫೮೩/೬೧–೬೨)

ಮಠದ ಎದುರಿನ ವೀರಗಲ್ಲು

ಶಾಸನವು ಹೆಚ್ಚು ತ್ರುಟಿತವಾಗಿರುವುದರಿಂದ ಶಕ ೭೮೪ ಕಾಲಾತೀತ ಸಂವತ್ಸರದ ಹೊರತು ಇತರ ಅಂಶಗಳು ಅಸ್ಪಷ್ಟವಾಗಿವೆ.

೧. ಸ್ವಸ್ತಿ ಕಾಲಾತೀತ ಸಮ್ವತ್ಸರಙ್ಗಳೆಳ್ನೂಱ

೨. ಮ್ಬತ್ತ [ನಾಲ್ಕ] XXX ವರಿಷಙ್ಗ

೩. X ಲ X ಳ್ಗೆ ಮಾಗುಲಿ XXX ಙ್ಗ ಮೆರ್ದೋೞ್

೪. ನಾ XXX ಬಲ್ಲಹ X ರು

೫.

೬.

೨

ಬಾಗಲವಾಡ–ಕ್ರಿ. ಶ. ೯ನೇ ಶತಮಾನ

(ಬಿ.ನಂ. ೫೩೨/೬೧-೬೨)

ಊರ ಹೊರಭಾಗದಲ್ಲಿ ನಿಲ್ಲಿಸಿರುವ ಕಲ್ಲು

ಶಕ ವರ್ಷ ಅಸ್ಪಷ್ಟವಾಗಿದೆ. ಹಾಮಯ್ಯನ ಉಲ್ಲೇಖ. ಇತರ ವಿವರಗಳು ತಿಳಿಯುವುದಿಲ್ಲ.

೧. ಸ್ವಸ್ತಿ ಶ್ರೀ ಶಕನೃಪ ಕಾಲಾತೀತ

೨. ಸಂವತ್ಸರ ಶತಂಗಳೆ [ಂಟು] ನೂರದ

೩. ಅಮವಾಸ್ಯ ರಕ್ಕಾಕ್ಷಿಯೆಂಬ ವಸರಿಹೆ

೪. ವಟ್ಟಿ [ಬು] XXXXXX·XX

೫.

೬.

೭. ಹಾಮಯ್ಯ XXXXXXXXX

೮. ಲಿ ಲ XXXX ಸುನ XXXX

೩

ಬಲ್ಲಟಗಿ-ಕ್ರಿ. ಶ. ೧೦ಶತಮಾನ

(ಬಿ.ನಂ. ೫೪೬/೬೧-೬೨)

ಮಸೀದಿಯ ಹತ್ತಿರ ನಿಲ್ಲಿಸಿದ ಕಲ್ಲು

ರಾಷ್ಟ್ರಕೂಟ ಮೂರನೆಯ ಇಂದ್ರನ ಆಳ್ವಿಕೆ. ಅವನ ಸಾಮಂತನ ಹೆಸರು ಹೇಳುವಲ್ಲಿ ಮುಂದಿನ ಭಾಗ ಹಾಳಾಗಿದೆ.

೧. ಸ್ವಸ್ತಿ ನಿತ್ಯಾವರಿಷ ಶ್ರೀ ಪೃಥುವಿ [ವಲ್ಲ]

೨. ಭ ಮಹಾರಾಜಾಧಿರಾಜ ಪರಮೇಶ್ವರ X

೩. X ಭಿ ವ್ಯ ಸಲುತ್ತಿರೆ ಸಮಧಿಗತಪ

೪. ಞ್ಚಮಹಾಶಬ್ದ ಮಹಾಸಾ

೪

ನುಗಡೋಣಿ-ಕ್ರಿ. ಶ. ೧೦ನೇ ಶತಮಾನ

(ಬಿ.ನಂ. ೮೨೩/೬೨-೬೩)

ಬಸವೇಶ್ವರ ಗುಡಿಯ ಎದುರಿನ ಕಂಬ

ರಾಷ್ಟ್ರಕೂಟ ಮೂರನೆಯ ಕೃಷ್ಣನ ಆಳ್ವಿಕೆ. ಉಳಿದ ವಿವರಗಳು ಅಸ್ಪಷ್ಟವಾಗಿವೆ.

೧. ಸ್ವಸ್ತಿ ಶ್ರೀ ಕನ್ನ

೨. ರ ದೇವನ ರಾಜ್ಯದೊ

೩. ಳ್ಪ್ರತಿಜೆ x x x

೪. [ಳ್ಪ] ಡೆದ x ಸನ

೫. ದೊ ಳ ಳ ಪಡೆದು

೬. x ಪನ್ನಿ x x x x x

೭. x ತ್ತ ರಾಱು x

೮. x x ಮುವತಿಱಱೂ

□

೫

ಬಲ್ಲಟಗಿ–ಕ್ರಿ. ಶ. ೧೧ನೇ ಶತಮಾನ

(ಬಿ.ನಂ. ೫೩೭/೬೧–೬೨)

ಹನುಮಶೆಟ್ಟಿಯ ಹೊಲದಲ್ಲಿ

ಶಾಸನವು ಬಹಳ ತ್ರುಟಿತವಾಗಿದೆ. ಪಾಪೇಶ್ವರ ದೇವಾಲಯ ಮತ್ತು ಗಾವುಂಡನೊಬ್ಬನ ಉಲ್ಲೇಖವಿದೆ.

೧. x x x x x

೨. ಪಾಪೇಶ್ವರ x x

೩. ಲಿಬ್ಬ x x x x

೪. ಗಾವುಣ್ಡ x x x

೫. [ಅಯ್ವ] x x x x

೬. x ಚ x x x

೭. x x x x x x[೧]

❐

---

೧. ಅಪೂರ್ಣವಾಗಿದೆ.

೬

ಗೂಗೇಬಾಳ–ಕ್ರಿ. ಶ. ೧೦ನೇ ಶತಮಾನ

(ಬಿ.ನಂ. ೮೧೬/೬೨–೬೩)

ಬಸವಣ್ಣನ ಗುಡಿಯ ಹತ್ತಿರ

ಶಾಸನವು ಹೆಚ್ಚು ತ್ರುಟಿತವಾಗಿದೆ. ವಿಷಯ ಅಸ್ಪಷ್ಟ. ಹತ್ತು ದ್ರಮ್ಮ ಮತ್ತು ಸಿದ್ಧಾಯದ ಉಲ್ಲೇಖವಿದೆ.

೧. x x x ಣ ಸ x x x x

೨. [ನೂ] ಱ ಇಪ್ಪತ್ತನಾಲ್ಕು x x x x x x

೩. x ಟಿ°ಸಿದ ಸಿದ x ಸ್ತಿ x x x x x

೪. x ದು ಅಂಮ x ಮತ್ತ x x x x

೫. ಪತ್ತು [ದ್ರ] ಸಿ[ದ್ಧಾಯ] x x

೬. ನ್ತಪ್ಪ x x x x x x

೭. x ನ್ದಾ x ಅಯ್ವ x x x x

❐

೭

ಪಡಪನದೊಡ್ಡಿ–ಕ್ರಿ. ಶ. ೧೦ನೇ ಶತಮಾನ

(ಬಿ.ನಂ. ೬೦೫/೬೧–೬೨)

ಪಾಟೀಲರ ಹೊಲದಲ್ಲಿ

ಭಂಬರರು ತಿಮ್ಮಯ್ಯನಿಗೆ ಪುಣ್ಯವಾಗಬೇಕೆಂದು ದಾನ ಬಿಟ್ಟಿದ್ದಾರೆ. ಆದರೆ ದಾನದ ವಿವರಗಳು ಅಸ್ಪಷ್ಟವಾಗಿವೆ. ಶಾಸನದ ಕೊನೆಯ ನಾಲ್ಕು ಸಾಲುಗಳ ಅಕ್ಷರಗಳು ಹಾಳಾಗಿವೆ.

೧. ಸ್ವಸ್ತಿ ಶ್ರೀ ಶಾಲಿವಾಹನ ಶಖ

೨. XXX ನೆಯ ದುರ್ಮುಖಿ ಸಂವಛ

೩. ರದ ಜೇಷ್ಟ [ಬ॥] ೩೦ ಯಲು ಭಂಬರರು

೪. X X X ಯನು ತಿಂಮಯ X X X X

೫. X X X X X ವಾಗಬೇಕುಯೆಂದು

೬. X X X X X X X X X X X

೭. X X X X X X X ಅಯಲಿ

೮. ಮ X ರಿಗೆ X X X X X X

೯.

೧೦.

೧೧.

೧೨.

೮
ಸಿರಿವಾರ-ಕ್ರಿ. ಶ. ೧೦ನೇ ಶತಮಾನ
(ಬಿ.ನಂ. ೮೨೭/೬೨-೬೩)
ಗುಡ್ಡದ ಕೆಳಗಿನ ದೊಡ್ಡ ಗುಂಡುಕಲ್ಲಿನ ಮೇಲೆ

ಶ್ರೀವುರ (ಸಿರಿವಾರ)ದ ೨೦೦ ಜನಗಳ ವ್ಯಾಪಾರಿ ಸಂಘದವರು ಮಾಡಿದ ಸಮಯ ಸ್ಥಿತಿಯ ವಿವರವಿದೆ.

೧. ಸ್ವಸ್ತಿ ಶ್ರೀ ಶ್ರೀವುರ ದಿಚ್ಛೂರ್ಬ್ಬ [ರ್] ಮಾಡಿದ ಸಮಯ ಸ್ಥಿತಿ

೨. ವೀಸಕ-ದಸಕ-ಪಞ್ಚಕ ಪಞ್ಚಕದೊಳಾದುದೆನ್ದು ಹಾನಿ

೩. ವ್ರಿದ್ಧಿ ಪಞ್ಚಕವನೆಯ್ದುವುದು ಪಞ್ಚಕನ್ತೆಱತೊಲಗೆ

೪. ದಶಕವನೆಯ್ದುವುದು ದಶಕನ್ತೆಱ ತೊಲಗೆ ವೀಸಕವನೆಯ್ದುಗು ಪಞ್ಚಕವೊಡಸಲ್ಲ

೫. ವೀಸಕನ್ತೆಱ ತೊಲಗೆ ಊರನೆಯ್ದುವುದು ಇನ್ತವು ತೊಲಗೆ

೬. ಊರಱಿಯ ತೆತ್ತ ಕೋಟಿ ಪಣವುನ್ನಿಗುಣ ಆಪಾ X ಸಮಯ ದೊಳ್ತಿಗುಣವನಿಕ್ಕಿ ಪುಗುವುದು

೭. ಈ ಸ್ಥಿತಿಯ ನಟಿದಾತ ಸ್ವಾನಗಾಳ್ದಾಭ ಚಾಣ್ಡಾಳಂ ಪೆಱನೆಟ್ಟು ಪೆಣ್ಡೆ [ರ್ದ್ದ] ಗೆ ಪಿಲ್ಲ

❑

೯

ಮಾನ್ವಿ-ಕ್ರಿ. ಶ. ೧೦ನೇ ಶತಮಾನ

(ಬಿ.ನಂ. ೬೦೦/೬೧-೬೨)

ಅಕ್ಕಸಾಲಿ ತಿರಕಣ್ಣನ ಮನೆಯ ಹತ್ತಿರ

ಶಾಸನವು ಅಪೂರ್ಣವಾಗಿದೆ ಮತ್ತು ತ್ರುಟಿತವಾಗಿದೆ.

೧. ವೇ ತ್ರೈ XXXXX

೨. ಮಸ್ತ ಪ್ರಸ XXXXXXX

೩. ಸ್ತಿ ಸಕ ವರಿಷ [೯] XXXXX

೪. ಬಹುಳ ೬ ಸೋಮವಾರ XXXX

೫. ದರ ಗುಣ್ಡನೆಂಬ XXXXXX

೬. ದ॥ ಸಾಮಾನ್ಯೋಯಂ XXXXX

೭. ಭವದ್ಭಿ ಸರ್ವ್ವಾನೇತಾ XXXX

೮. ಯೋಯಾಚತೇ ರಾಮ XXXX[೧]

---

೧. ಅಪೂರ್ಣವಾಗಿದೆ.

೧೦
ಬಲ್ಲಟಗಿ-ಕ್ರಿ. ಶ. ೧೦೩೨
(ಬಿ.ನಂ. ೫೩೪/೬೧-೬೨)
ಅಗಸಿಯ ಕಟ್ಟೆಯ ಸಮೀಪ ನಿಲ್ಲಿಸಿದಕಲ್ಲು

ಚಾಲುಕ್ಯ ಎರಡನೆಯ ಜಯಸಿಂಹನ ಆಳ್ವಿಕೆ. ಚಕ್ರವರ್ತಿಯ ರಾಣಿ ಮಹಾದೇವಿಯು ಪುವ್ವರವಳ್ಳಿಯ ಬೀಡಿನಲ್ಲಿದ್ದಾಗ, ತಂತ್ರಪಾಳ ಮಲ್ಲಯನು ಬಳ್ಳನಿಟ್ಟಗೆ (ಬಲ್ಲಟಗಿ)ಯಲ್ಲಿ ಪ್ರತಿಷ್ಠಾಪಿಸಿದ ತ್ರೈಪುರುಷ ದೇವಾಲಯಕ್ಕೆ ಅಯ್ಯಣವಾಡಿ-೩೦೦ರ ಮನ್ನೆಯ ಲೋಕಾದಿತ್ಯನಿಂದ ಭೂಮಿಯನ್ನು ಪಡೆದು ದಾನಬಿಡುತ್ತಾಳೆ.

೧. ಸ್ವಸ್ತಿ ಸಮಸ್ತಭುವ
೨. ನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾ
೩. ಧಿ ರಾಜ ಪರಮೇಶ್ವರ ಪರಮಭಟ್ಟಾರಕಂ
೪. ಸತ್ಯಾಶ್ರಯ ಕುಳತಿಬಕಂ ಚಾಳುಕ್ಯಾ ಭ
೫. ರಣಂ ಶ್ರೀಮಜ್ಜಗದೇಕಮಲ್ಲದೇವರ ವಿಜ
೬. ಯ ರಾಜ್ಯ ಮುತ್ತರೋತ್ತರಾಭಿವೃದ್ಧಿ ಪ್ರವರ್ಧ
೭. ಮಾನ ಮಾಚಂದ್ರರ್ಕ್ಕ ತಾರಂಬರಂ ಸಲುತ್ತಮಿ [ರೆ]
೮. ಸ್ವಸ್ತ್ಯನವರತ ಪರಮಕಲ್ಯಾಣಾಭ್ಯು
೯. ದಯ ಸಹಸ್ರಫಳ ಭೋಗ ಭಾಗಿನಿ ದ್ವಿತಿ
೧೦. ಯ ಲಕ್ಷ್ಮೀ ಸಮಾನೆಯರಪ್ಪ ಶ್ರೀ ಮ
೧೧. ಹಾದೇವಿಯರ್ ತಂ ನ್ತ (ತನ್ತ್ರ) ಪಾಳ ಮಲ್ಲಯನ
೧೨. ಸಿಯಿಲ್ಲದಾತ ಗುಣಕ ಸಂ x ಣ ನx
೧೩. xಯಣಗೆ ಪುವ್ವರವಳ್ಳಿಯ ಬೀ x
೧೪. xxಸಕವರಿಷ ೯೫೪ ನೆಯ ದುದುಂಭಿ ಸಂ x
೧೫. xxxದ ಚೈತ್ರ ಸುದ್ಧ ತ್ರಯೋದಸಿ ಬೃಹಸ್ಪ [ತಿ]
೧೬. [ವಾರ] ದಂದು ಅಯ್ಯಣವಾಡಿ ೩೦೦ [ಱ] ಮ [ನ್ನೆ]
೧೭. ಯ ಲೋಕಾದಿತ್ಯನ ಕೈಯೊಳ್ ಧಾರಾಪೂ xx
೧೮. ಕಾಲ್ಗಚ್ಚುಗೋಣ್ಡು ತ್ರಭೋಗಾಭ್ಯನ್ತರ ಸಿ xx
೧೯. ಪಡದು ಬಳ್ಳನಿಟ್ಟಿಗೆಯೊಳ್ ತ್ರೈಪುರುಷ [ದೇವ]
೨೦. ರ ಪ್ರತಿಷ್ಠೆಗೆಯ್ದು ದೇವರ್ಗ್ಗೆ ಬಿಟ್ಟ ಕರಿಯ
೨೧. xxx೫೦ ತೋಂಟ ಮತ್ತ xx

□

೧೧

ಬಲ್ಲಟಗಿ-ಕ್ರಿ. ಶ. ೧೦೨೯

(ಬಿ.ನಂ. ೫೪೨/೬೧-೬೨)

ಶಾಲೆಯ ಹತ್ತಿರ

ಚಾಲುಕ್ಯ ಎರಡನೆಯ ಜಯಸಿಂಹನ ಆಳ್ವಿಕೆ. ಚಕ್ರವರ್ತಿಯ ರಾಣಿ ಸೋಮಲದೇವಿಯು ಪನ್ನಿರ್ಕೆಯಪ್ಪಯಣ ವೀಡಿನಲ್ಲಿದ್ದಾಗ, ಭತ್ತಗ್ರಾಮ ಬಳ್ಳಟಿಗಿಯ ಬಸದಿಗೆ ದಾನಬಿಡುತ್ತಾಳೆ.

೧. ಸ್ವಸ್ತಿ ಸ XXXXXXXXXXX

೨. ಪದ XXXXXXXXXXX

೩. ಶ್ರೀ ಮಜ್ಜಗದೇಕಮಲ್ಲ ದೇವರ ವಿಜಯ XXXXXXXX

೪. ಮಾನ ಮಾ [ಚನ್ದ್ರಾರ್ಕ್ಕತಾರಂಬರಂ ಸಲುತ್ತಮಿರೆ॥ ಸ್ವಸ್ತ್ಯನವರತ ಪರಮ]

೫. ಕಲ್ಯಾಣಾಭ್ಯುದಯ ಸಹಸ್ರಫಳಭೋಗಭಾಗಿನಿ ದ್ವಿತೀಯ ಲಕ್ಷ್ಮೀ XX

೬. ನ ಕಾಮಧೇನು ಆಶ್ರಿತಜನಕಲ್ಪಲತೆ ಶ್ರೀ ಮಜ್ಜಗದೇಕಮಲ್ಲ ದೇವ ಪಾ

೭. ದ ಪಂಕಜ ಭ್ರಮೆಯರಪ್ಪ ಶ್ರೀಮತ್ಸೋಮಲದೇವಿಯರ್ ಪನ್ನಿರ್ಕ್ಕೆಯ

೮. ಪ್ಪಯಣ ವೀಡಿನೊಳ್ ಸಕವರ್ಷ ೯೫೧ನೆಯ ಶುಕ್ಲ ಸಂವತ್ಸರ ಪುಷ್ಯ ಬಹುಳ

೯. ಪಾಡಿವ ಬುಧವಾರದನ್ದುತ್ತರಾಯಣ ಸಂಕ್ರಾಂತಿಯ ಪರ್ವ್ವನಿಮಿತ್ತಂ ಯಡದೊಱೆಯಿ

೧೦. ಚ್ಚಸಿರದೊಳಗಣ ಭತ್ತಗ್ರಾಮ ಬಳ್ಳನಿಟ್ಟಗೆಯ ಬಸದಿಗೆಯಲ್ಲಿಯ

೧೧. ಕಂಮತದೊಳಗೆ ಪಿರಿಯ ಕೋಲೋಳ್ ಬಿಟ್ಟ ಕರಿಯನೆಲಂ ಮ

೧೨. ತ್ತರಿಪ್ಪತ್ತ ನಾಲ್ಕು ತೋಂಟ ಮತ್ತರೊನ್ದು ಮನೆಯಯ್ದು ಘಾಣವೊನ್ದು ॥ ಶ್ಲೋಕ ॥ ನ ವಿಷಂ

೧೩-೨೩ ಹಾಳಾಗಿಹೋಗಿದೆ.

೧೨
ಬಲ್ಲಟಗಿ-ಕ್ರಿ. ಶ. ೧೦೩೧
(ಬಿ.ನಂ. ೫೪೫/೬೧-೬೨)
ದಂಡದ ಮಾಗಿ

ಚಾಲುಕ್ಯ ಜಯಸಿಂಹನ ಆಳ್ವಿಕೆ. ಚಕ್ರವರ್ತಿಯ ರಾಣಿ ಸೋಮಲದೇವಿಯು ಏತಗಿರಿ (ಯಾದಗಿರಿ)ಯ ನೆಲೆವೀಡಿನಲ್ಲಿದ್ದಾಗ ದಿಗ್ಗಿಗೆಯ ಮಧುಸೂದನ ಭಟ್ಟರಿಗೆ ಭತ್ತಗ್ರಾಮ ಬಳ್ಳಟಗಿಯ ಭೂಮಿಯಲ್ಲಿ ದಾನವನ್ನು ನೀಡುತ್ತಾಳೆ.

೧. ಸ್ವಸ್ತಿ ಸಮಸ್ತ ಭುವನಾಶ್ರಯ ಪೃಥ್ವೀ ವ
೨. ಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ
೩. ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮಜ್ಜಗ
೪. ದೇಕಮಲ್ಲದೇವರ ವಿಜಯರಾಜ್ಯ ಮುತ್ತರೋತ್ತರಾಭಿವೃದ್ಧಿ
೫. ಪ್ರವರ್ದ್ಧಮಾನ ಮಾಚನ್ದ್ರಾರ್ರ್ಕ ತಾರಂ ಸಲುತ್ತಮಿರೆ॥
೬. ಸ್ವಸ್ತ್ಯನವರತ ಪರಮಕಲ್ಯಾಣಾಭ್ಯುದಯ ಸಹಸ್ರ
೭. ಫಳಭೋಗಭಾಗಿನಿ ದ್ವಿತೀಯ ಲಕ್ಷ್ಮಿ ವಿಶಿಷ್ಟ
೮. ಜನ ಕಾಮಧೇನು ವಾಶ್ರಿತಜನ ಕಲ್ಪಲತೆ
೯. ಶ್ರೀ ಮಜ್ಜಗದೇಕಮಲ್ಲದೇವರ ಪಾದ ಪಂಕಜ ಭ್ರ
೧೦. ಮರಿಯರಪ್ಪ ಶ್ರೀ ಮತ್ಸೋಮಲದೇವಿಯರ್
೧೧. ಸಕವರ್ಷ ೯೫೩ನೆಯ ಪ್ರಜಾಪತಿ ಸಂವತ್ಸ
೧೨. ರದ ಶ್ರಾವಣದ ವುಣ್ಣಮಿ ಬುಧವಾರ ದನ್ದಿ
೧೩- ನ ಸೋಮ ಗ್ರಹಣದನ್ದು ಏತ
೧೪. ಗಿರಿಯ ನೆಲವೀಡಿನೊಳ್ ದಿಗ್ಬಿಗೆಯ ಮಧು
೧೫. ಸೂದನ ಭಟ್ಟರ್ಗ್ಗೆ ಭತ್ತಗ್ರಾಮ ಬಳ್ಳನಟ್ಟ
೧೬. ಗೆಯೊಳ್ ಧಾರಾಪೂರ್ವಕದಿಂ ಪರ್ವ್ವನಮಸ್ಯ
